**ಕರ್ನಾಟಕ ಸಾಹಿತ್ಯ ಅಕಾಡೆಮಿ**
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨
ದೂರವಾಣಿ : ೨೨೧೦ ೬೪೬೦
ಫ್ಯಾಕ್ಸ್ : ೦೮೦–೨೨೨೧ ೧೭೩೦
www.karnatakasahithyaacademy.org

# ವಾರ್ತಾಪತ್ರ

ದ್ವೈಮಾಸಿಕ ಪತ್ರಿಕೆ

**ಸಂಚಿಕೆ : ೫೩**
**ಮೇ–ಜೂನ್ – ೨೦೦೯**

*ಪ್ರಧಾನ ಸಂಪಾದಕರು*
**ಪ್ರೊ. ಎಂ.ಎಚ್. ಕೃಷ್ಣಯ್ಯ**

*ಸಂಪಾದಕರು*
**ಆರ್. ವಸಂತ್‌ಕುಮಾರ್**
**ಎಂ.ಡಿ. ತ್ರಿಲೋಚನ ಒಡೆಯರ್**

*ಪ್ರಕಾಶಕರು*
**ವಿ.ಎನ್. ಮಲ್ಲಿಕಾರ್ಜುನಸ್ವಾಮಿ**
ರಿಜಿಸ್ಟ್ರಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ

*ಮುಖಪುಟ ಚಿತ್ರ*
**ಸಿ. ಚಂದ್ರಶೇಖರ್**

*ಮುದ್ರಕರು*
**ಇಳಾ ಮುದ್ರಣ**
ಬೆಂಗಳೂರು – ೫೬೦ ೦೨೬
ದೂರವಾಣಿ : ೨೬೭೫ ೭೧೫೯

## ಪರಿವಿಡಿ

- ೨೦೦೮ನೆಯ ಸಾಲಿನ ಗೌರವ ಪ್ರಶಸ್ತಿ ಪುರಸ್ಕೃತರು ... ೩
- ೨೦೦೭ರ ಅತ್ಯುತ್ತಮ ಕೃತಿ ಗೌರವಕ್ಕೆ ಅರ್ಹವಾದ ಪುಸ್ತಕಗಳ ಪಟ್ಟಿ ... ೫
- ಪತ್ರಿಕಾ ಮಾರ್ದನಿಗಳು ... ೧೦



**ಅಕಾಡೆಮಿಯ ಅಂತರಜಾಲ ತಾಣ ಉದ್ಘಾಟಿಸುತ್ತಿರುವ**
**ಶ್ರೀ ಜಯರಾಮರಾಜೇ ಅರಸ್**
ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ



**ಸಮಾರಂಭದಲ್ಲಿ ಅತಿಥಿ ಗಣ್ಯರು**



**ಅಂತರಜಾಲ ತಾಣದಲ್ಲಿ ಸ್ವರಚಿತ ಕವಿತೆಗಳ ವಾಚನದ ನೋಟ**

*ಕನ್ನಡ ಸಾಹಿತ್ಯ ಕ್ಷೇತ್ರವನ್ನು, ಹಲವಾರು ನೆಲೆಗಳಲ್ಲಿ ಶ್ರೀಮಂತಗೊಳಿಸಿರುವ ಸಾಹಿತಿಗಳನ್ನು ಗುರುತಿಸಿ, ಅವರಿಗೆ ವಾರ್ಷಿಕ ಪ್ರಶಸ್ತಿಗಳನ್ನು ನೀಡಿ ಗೌರವಿಸುವ ಸಾಂಸ್ಕೃತಿಕ ಹೊಣೆಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ನಿರ್ವಹಿಸುತ್ತಾ ಬಂದಿದೆ. ಪ್ರತಿವರ್ಷ ಅವರ ಸಮಗ್ರ ಸಾಹಿತ್ಯ ಸೇವೆಯನ್ನು ಗಮನಿಸಿ, ಪ್ರಮುಖ ಲೇಖಕ ಲೇಖಕಿಯರನ್ನು ಈ ಗೌರವ ಪ್ರಶಸ್ತಿಗೆ ಆಯ್ಕೆ ಮಾಡಲಾಗುತ್ತದೆ. ಅಕಾಡೆಮಿ ಆರಂಭವಾದಾಗಿನಿಂದ (೧೯೬೫) ಈವರೆಗೆ ೨೩೩ ಲೇಖಕ ಲೇಖಕಿಯರಿಗೆ ಗೌರವ ಪ್ರಶಸ್ತಿ ನೀಡಿ ಪುರಸ್ಕರಿಸಲಾಗಿದೆ.*

# ೨೦೦೮ನೆಯ ಸಾಲಿನ ಗೌರವ ಪ್ರಶಸ್ತಿ ಪುರಸ್ಕೃತರು



## ಪ್ರೊ. ಅ.ರಾ. ಮಿತ್ರ

೭೪ ವರ್ಷ ವಯಸ್ಸಿನ ಹಾಸ್ಯದ ಮೋಡಿಗಾರ ಎಂದೇ ಕನ್ನಡ ಸಾಹಿತ್ಯ ಲೋಕದಲ್ಲಿ ಪ್ರಸಿದ್ಧರಾಗಿರುವ ಅ.ರಾ. ಮಿತ್ರ (ಅಕ್ಕಿ ಹೆಬ್ಬಾಳ ರಾಮಣ್ಣ ಮಿತ್ರ) ಮಂಡ್ಯ ಜಿಲ್ಲೆಯವರು. ಕನ್ನಡ ಲಲಿತಪ್ರಬಂಧಗಳ ಜನಕ ಪ್ರೊ. ಎ.ಎನ್. ಮೂರ್ತಿರಾಯರು, ಅ. ರಾ. ಮಿತ್ರರು ಒಂದೇ ಊರಿನವರು. ಕನ್ನಡ ಸಾಹಿತ್ಯದ ಲಲಿತ ಪ್ರಬಂಧದ ಕ್ಷೇತ್ರಕ್ಕೆ ಇಬ್ಬರು ಮಹನೀಯರನ್ನು ನೀಡಿದ ಹಿರಿಮೆ ಅಕ್ಕಿ ಹೆಬ್ಬಾಳಿಗೆ ಸಲ್ಲುತ್ತದೆ. ಬಾಲ್ಕನಿಯ ಬಂಧುಗಳು, ಆರತಕ್ಷತೆ, ನಾನೇಕೆ ಕೊರೆಯುತ್ತೇನೆ ಮುಂತಾದ ಪ್ರಬಂಧ ಸಂಗ್ರಹಗಳು, ಪ್ರೇಮನದಿಯ ದಡಗಳಲ್ಲಿ, ಮಹಾಭಾರತ ಪಾತ್ರ–ಸಂಗತಿಗಳು (೩ ಸಂಪುಟಗಳು), ಛಂದಸ್ಸಿಗೆ ಸಂಬಂಧಿಸಿದ 'ಛಂಧೋಮಿತ್ರ' ಮಿತ್ರರ ಮೇರು ಕೃತಿ. ವಚನಕಾರರು ಮತ್ತು ಶಬ್ದಕಲ್ಪ, (ಅತ್ಯಂತ ಅಪರೂಪದ ಒಂದು ವಿದ್ವತ್ ಕೃತಿ), ಒಳನೋಟಗಳು–ಜರ್ಮನ್ ಸಂಪ್ರದಾಯ ದರ್ಪಣ, ಶಿಕ್ಷಣ ಚಿಂತನ, ಕಾಲಿಗುಲ ಮತ್ತು ತಪ್ಪಿದ ಎಳೆ ಇವಿಷ್ಟು ಪ್ರಕಟಿತ ಕೃತಿಗಳು ಇವಲ್ಲದೆ ಅಜಿತ ಪುರಾಣ ಸಂಗ್ರಹ, ಪಂಪ ಭಾರತ ಸಂಗ್ರಹ, ಪುರಂದರ ಸಾಹಿತ್ಯ ದರ್ಶನ ಇವುಗಳು ಸಂಪಾದಿತ ಕೃತಿಗಳು. ಕೈಲಾಸಂ, ಚಂದ್ರಗುಪ್ತ ಮೌರ್ಯ–ಜೀವನ ಚರಿತ್ರೆಗಳು. ಮಿತ್ರರಿಗೆ ಕಾವ್ಯಾನಂದ ಮತ್ತು ಗೊರೂರು ಸ್ಮಾರಕ ಪುರಸ್ಕಾರಗಳು ದೊರೆತಿವೆ.



## ಶ್ರೀಮತಿ ಹಸನಬಿ ಬೀಳಗಿ

ಬಾಗಲಕೋಟೆಯ ಬೀಳಗಿಯಂಥ ಅತ್ಯಂತ ಹಿಂದುಳಿದ ಪ್ರದೇಶದಲ್ಲಿ ೧೯೩೬ರಲ್ಲಿ (೭೩ ವರ್ಷ) ಮತ್ತು ಶಿಕ್ಷಣಕ್ಕೆ ಎರವಾಗಿದ್ದ ಅಲ್ಪಸಂಖ್ಯಾತ ಸಮುದಾಯದಲ್ಲಿ ಹುಟ್ಟಿದ ಬೀಳಗಿಯವರು ತಮ್ಮ ಛಲದಿಂದಲೇ ಶಿಕ್ಷಣವನ್ನು ಮುಗಿಸಿ ಶಾಲಾ ಶಿಕ್ಷಕಿಯಾಗಿ ವೃತ್ತಿ ಜೀವನ ಆರಂಭಿಸಿದರು. ನಂತರ ಕನ್ನಡ ಸಾಹಿತ್ಯದಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿಯನ್ನು ಪ್ರಥಮ ಶ್ರೇಣಿಯಲ್ಲಿ ಮುಗಿಸಿ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿ, ಪ್ರವಾಚಕರಾಗಿ ಸುಮಾರು ೨೩ ವರ್ಷಗಳು ಸೇವೆ ಸಲ್ಲಿಸಿ (ಒಟ್ಟು ೪೦ ವರ್ಷಗಳ ಸೇವೆ) ನಿವೃತ್ತರಾಗಿದ್ದಾರೆ. ವಚನ ಸಾಹಿತ್ಯದಲ್ಲಿ ಮತ್ತು ಜನಪದ ಸಾಹಿತ್ಯದಲ್ಲಿ ವಿಶೇಷ ಆಸಕ್ತಿ ವಹಿಸಿರುವ ಬೀಳಗಿಯವರು ಗಿರಿಜಾ ಕಲ್ಯಾಣ ಸಂಗ್ರಹ, ನೀಲಾಂಬಿಕೆ, ಶಿವಶರಣೆಯರು, ವಚನಕಾರ್ತಿಯರು ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಇವರ ಸಾಹಿತ್ಯ ಸೇವೆಗಾಗಿ ಈಗಾಗಲೇ ಅಂತರರಾಷ್ಟ್ರೀಯ ಮಹಿಳಾ ವರ್ಷದ ಪ್ರಶಸ್ತಿ, ಪಿ. ಲಂಕೇಶ್ ಪ್ರಶಸ್ತಿ ಇತ್ಯಾದಿ ಗೌರವಗಳು ಸಂದಿವೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ.

## ಶ್ರೀ ವಿಷ್ಣು ನಾಯ್ಕ



ಮಲೆನಾಡಿನ ಕುಗ್ರಾಮವೊಂದರಲ್ಲಿ ಅತ್ಯಂತ ನಿರ್ಲಕ್ಷಿತ ಸಮುದಾಯದಲ್ಲಿ ಹುಟ್ಟಿ ಹೋರಾಟದೊಂದಿಗೆ ತಮ್ಮ ಬದುಕನ್ನು ರೂಪಿಸಿಕೊಂಡು ಬಂದ ವಿಶಿಷ್ಟ ಲೇಖಕ ಶ್ರೀ ವಿಷ್ಣು ನಾಯ್ಕ ಅವರು. ವಿದ್ಯಾರ್ಥಿ ದೆಸೆಯಿಂದಲೇ ಕವಿತೆಗಳನ್ನು ಬರೆಯುತ್ತ ಮುಂದೆ ನಾಟಕ, ವಿಮರ್ಶೆ, ವಿಚಾರ, ಅಂಕಣ ಸಾಹಿತ್ಯ ಕಥೆ, ಸಂಪಾದನೆ ಹೀಗೆ ಸುಮಾರು ೩೫ ಕೃತಿಗಳನ್ನು ಬರೆದಿದ್ದಾರೆ. ಸಾಹಿತ್ಯ ಕೃಷಿಯೊಂದಿಗೆ ಪ್ರಕಾಶನ ಸಂಸ್ಥೆಯನ್ನೂ ಕಟ್ಟಿ ಬೆಳೆಸಿದ್ದಲ್ಲದೆ ಭೂ ಮಾಲೀಕರ ವಿರುದ್ಧದ ಹೋರಾಟ, ಪರಿಸರದ ಹೋರಾಟಗಳಲ್ಲೂ ನಿರಂತರವಾಗಿ ತಮ್ಮನ್ನು ತೊಡಗಿಸಿಕೊಂಡವರು. ೬೫ರ ಪ್ರಾಯದಲ್ಲಿರುವ ವಿಷ್ಣು ನಾಯ್ಕರ ಸಾಹಿತ್ಯ ಕೃಷಿಗೆ ಕರ್ನಾಟಕ ರಾಜ್ಯ ಪ್ರಶಸ್ತಿಯೂ ಸೇರಿದಂತೆ ರಾಜ್ಯ ಮಟ್ಟದ ಆದರ್ಶ ಶಿಕ್ಷಕ ಪ್ರಶಸ್ತಿ, ಸಾಹಿತ್ಯ ಅಕಾಡೆಮಿಯ ಪುಸ್ತಕ ಬಹುಮಾನ ಮುಂತಾದ ಪುರಸ್ಕಾರಗಳು ಸಂದಿವೆ. ವಾಸ್ತವ, ಹೊಸ ಭತ್ತ, ಬೆಳಕಿನ ಕರೆ, ನೋವು ಪ್ರೀತಿಯ ಪ್ರಶ್ನೆ, ದುಡಿಯುವ ಕೈಗಳ ಹೋರಾಟದ ಕತೆ–ಮುಂತಾದವು ಅವರ ಪ್ರಮುಖ ಕೃತಿಗಳು.

## ಪ್ರೊ. ಮಲ್ಲಿಕಾರ್ಜುನ ಹಿರೇಮಠ



ಈಗಿನ ಕೊಪ್ಪಳ ಜಿಲ್ಲೆಯ ಬಿಸನಳ್ಳಿಯವರಾದ ಹಿರೇಮಠ ಅವರು ಇಂಗ್ಲಿಷ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದು ಈಗಿನ ಬಾಗಲಕೋಟೆ ಜಿಲ್ಲೆಯ ಹುಣಗುಂದದಂತಹ ಗ್ರಾಮೀಣ ಪ್ರದೇಶದಲ್ಲಿ ೩೦ ವರ್ಷ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ೬೪ ವರ್ಷಗಳ ವಸಂತಗಳನ್ನು ಕಂಡಿರುವ ಶ್ರೀಯುತರು ಅಮೀನಪುರದ ಸಂತೆ – ಕಥಾ ಸಂಕಲನದ ಮೂಲಕ ನಾಡಿನ ಮನೆಮಾತಾದವರು. 'ಜ್ಞಾನೇಶ್ವರನ ನಾಡಿನಲ್ಲಿ' ಇವರ ಪ್ರವಾಸ ಕಥನ. 'ಹವನ' ಇವರ ಕಾದಂಬರಿಯಾಗಿದೆ. 'ಹವನ' ಕಾದಂಬರಿ ಲಂಬಾಣಿ ಜನಾಂಗದ ಜೀವನ ಮತ್ತು ಸಂಸ್ಕೃತಿ ಕುರಿತಾದ ಒಂದು ಅಪರೂಪದ ಕಾದಂಬರಿ. 'ಅಕ್ವೇರಿಯಂ ಮೀನು', ಇವರ ಕವನ ಸಂಕಲನವಾಗಿದ್ದು, ನವ್ಯದ ಭರಾಟೆಯ ಕಾಲದಲ್ಲಿ ಇದು ಆಗಿನ ಓದುಗರ ಮೆಚ್ಚುಗೆ ಪಡೆದಿತ್ತು. ಶ್ರೀಯುತರು ಕಾವ್ಯದಿಂದ ಗದ್ಯದ ಕಡೆಗೆ ಹೊರಳಿ ಅಪರೂಪದ ಸಾಹಿತ್ಯ ಕೃತಿಗಳನ್ನು ಕೊಟ್ಟಿದ್ದಾರೆ. ಹಲವಾರು ಶಿಷ್ಯರನ್ನು ಸಾಹಿತ್ಯದ ಕಡೆಗೆ ಎಳೆದು ತಂದು ಅವರನ್ನು ನಾಡಿನ ಅತ್ಯುತ್ತಮ ಸಾಹಿತಿಗಳನ್ನಾಗಿ ನಿರ್ಮಿಸಿದ ಹೆಗ್ಗಳಿಕೆ ಇವರದು.

## ಶ್ರೀ ಲಕ್ಷ್ಮಣ್



ಕನಕಪುರ ತಾಲೂಕಿನ ಕತ್ರಿಗುಪ್ಪೆ ಹಳ್ಳಿಯಲ್ಲಿ ೧೯೫೭ರಲ್ಲಿ (೫೨ ವರ್ಷ) ಹುಟ್ಟಿದ ಲಕ್ಷ್ಮಣ್ ಅವರು 'ಮೂಕವೇದನೆ' ಕವನ ಸಂಕಲನದ ಮೂಲಕ ಸಾಹಿತ್ಯ ಲೋಕವನ್ನು ಪ್ರವೇಶಿಸಿದರು. 'ಕಾವ್ಯ ಖಡ್ಗ' ಕವನಗಳ ಸಂಪಾದನೆ, ವಿಮೋಚನಾ ವಾಣಿ ಸೂಕ್ತಿಗಳ ಸಂಪಾದನೆ, ಬೆಳಕಿನೆಡೆಗೆ ಕವನಗಳನ್ನು ಸಂಪಾದಿಸಿದ ಇವರು ಜಡಿಮಳೆ, ಬದುಕು, ಕಾದಂಬರಿಗಳನ್ನೂ, ಅನೇಕ ಉತ್ತಮ ಕಥೆಗಳನ್ನೂ ಬರೆದಿದ್ದಾರೆ. 'ಸಂಬೋಳಿ' ಎಂಬ ಇವರ ಆತ್ಮಕಥೆಯೂ ದಲಿತ ಶೋಷಣೆಯ ಪರಾಕಾಷ್ಠೆಯನ್ನು ತೆರೆದಿಟ್ಟ ಮಹತ್ವದ ಕೃತಿ ಎನಿಸಿ ಮತ್ತು ದೇಶ ಹಲವು ಭಾಷೆಗಳಿಗೆ ತರ್ಜುಮೆಗೊಂಡಿದೆ. ಇವರ 'ಜಡಿಮಳೆ' ಕೃತಿ ತಮಿಳಿಗೆ ಅನುವಾದಗೊಂಡು ಅತ್ಯಂತ ಜನಪ್ರಿಯ ಕೃತಿ ಎನಿಸಿತು. ಎರಡು ಪ್ರವಾಸ ಕಥನಗಳನ್ನು ಬರೆದಿರುವ ಲಕ್ಷ್ಮಣ್ ಅವರ ಸಜ್ಜನಿಕೆ ಮತ್ತು ಸಾಹಿತ್ಯ ಕೃಷಿಗೆ ಬಾಬು ಜಗಜೀವರಾಂ ಪ್ರಶಸ್ತಿ, ಡಾ. ಅಂಬೇಡ್ಕರ್ ಫೆಲೋಶಿಪ್ ಪ್ರಶಸ್ತಿ, ಬಸವಶ್ರೀ ಪ್ರಶಸ್ತಿ, ಆದರ್ಶ ಲೇಖಕ, ರಾಷ್ಟ್ರಕವಿ ಕುವೆಂಪು ಪ್ರಶಸ್ತಿ– ಹೀಗೆ ಅನೇಕ ಪ್ರಶಸ್ತಿಗಳು ಸಂದಿವೆ. ಎಲೆಮರೆಯ ಕಾಯಿಯಂತೆ ದಲಿತ ಲೋಕದ ಸಂವೇದನೆಗಳನ್ನು ದಾಖಲಿಸುತ್ತಲೇ ಬಂದಿರುವ ವಿಶಿಷ್ಟ ಲೇಖಕ ಶ್ರೀ ಲಕ್ಷ್ಮಣ್ ಅವರು.

# ೨೦೦೭ರಲ್ಲಿ ಪ್ರಕಟವಾದ ೧೮ ಪ್ರಕಾರದ ಅತ್ಯುತ್ತಮ ಕೃತಿಗಳೆಂಬ ಗೌರವಕ್ಕೆ ಅರ್ಹವಾದ ಪುಸ್ತಕಗಳು



ಕಾವ್ಯ

**ಒಡೆಯಲಾರದ ಪ್ರತಿಮೆ**

ಲೇ: ಬಸವರಾಜ ವಕ್ಕುಂದ

ಪುಟ: ೧೦೬, ಬೆ: ರೂ. ೪೦/-

ಪ್ರ: ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿರಸ್ತೆ
ಚಾಮರಾಜಪೇಟೆ, ಬೆಂಗಳೂರು-೧೮



ನಾಟಕ

**ದಾಳ**

ಲೇ: ಎಸ್.ಜಿ. ಸಿದ್ಧರಾಮಯ್ಯ

ಪುಟ: ೮೦, ಬೆಲೆ: ರೂ. ೪೦/-

ಪ್ರ: ಸಚ್ಚಿನ್ ಪಬ್ಲಿಷರ್ಸ್,
ನಂ. ೬೨೪, ೯ನೇ ಡಿ ಮುಖ್ಯರಸ್ತೆ
ಹಂಪಿನಗರ
ವಿಜಯನಗರ, ೨ನೇ ಹಂತ
ಬೆಂಗಳೂರು-೫೬೦ ೧೦೪



ಕಾದಂಬರಿ

**ಯಾದ್ ವಶೇಮ್**

ಲೇ: ನೇಮಿಚಂದ್ರ

ಪುಟ: ೨೮೮, ಬೆಲೆ: ರೂ. ೧೭೫/-

ಪ್ರ: ನವಕರ್ನಾಟಕ ಪಬ್ಲಿಕೇಶನ್ಸ್
ಪ್ರೈವೇಟ್ ಲಿಮಿಟೆಡ್,
ಎಂಬೆಸಿ ಸೆಂಟರ್, ಬೆಂಗಳೂರು-೦೧



ಲಲಿತ ಪ್ರಬಂಧ

**ದೇವರುಗಳ ಟೈಮೇ ಸರಿ ಇಲ್ಲ !**

ಲೇ: ಪ್ರೊ.ಎಚ್.ಎಲ್.ಕೇಶವಮೂರ್ತಿ

ಪುಟ: ೧೧೨, ಬೆಲೆ: ರೂ. ೭೦/-

ಪ್ರ: ಅಭಿರುಚಿ ಪ್ರಕಾಶನ, ನಂ. ೩೮೬
೧೪ನೆಯ ಮುಖ್ಯರಸ್ತೆ,
೩ನೆಯ ಅಡ್ಡರಸ್ತೆ,
ಸರಸ್ವತೀಪುರ, ಮೈಸೂರು-೯



ಸಣ್ಣಕತೆ

**ನನ್ನ ಇನ್ನಷ್ಟು ಕತೆಗಳು**

ಲೇ: ಮಹಮ್ಮದ್ ಕುಳಾಯಿ

ಪುಟ: ೧೨೦, ಬೆಲೆ: ರೂ. ೧೦೦/-

ಪ್ರ: ಕೇಂದ್ರ ಬ್ಯಾರಿ ಸಾಹಿತ್ಯ
ಪರಿಷತ್ (ರಿ)
ಎ.ಪಿ.ಎಸ್. ಆರ್ಕೇಡ್, ಕಂಕನಾಡಿ,
ಮಂಗಳೂರು-೫೭೫೦೦೨



ಪ್ರವಾಸ ಸಾಹಿತ್ಯ

**ದುಬೈ ಎಂಬ ಮಾಯಾನಗರಿ**

ಲೇ: ಸಂಗಮೇಶಕೋಟಿ

ಪುಟ: ೧೧೮, ಬೆಲೆ: ರೂ. ೭೦/-

ಪ್ರ: ಸಂಗಮ ಪ್ರಕಾಶನ
ನವನಗರ, ಹುನಗುಂದ-೫೮೭೧೧೮,
ಬಾಗಲಕೋಟೆ ಜಿಲ್ಲೆ



ಜೀವನ ಚರಿತ್ರೆ/ಆತ್ಮಕಥೆ

**ಬಣ್ಣದ ಬದುಕಿನ ಚಿನ್ನದ ದಿನಗಳು**

ಲೇ: ಗಣೇಶ ಅಮೀನಗಡ

ಪುಟ: ೧೬೪, ಬೆಲೆ: ರೂ. ೬೦/-

ಪ್ರ: ಪ್ರಸಾಧನ ಪ್ರಕಾಶನ,
ಭಾರತೀನಗರ, ಬಿಜೈ,
ಮಂಗಳೂರು-೫೭೫೦೦೪



ಸಾಹಿತ್ಯ ವಿಮರ್ಶೆ

**ಕುವೆಂಪು ಸಾಹಿತ್ಯ ದರ್ಶನ**

ಲೇ: ಡಿ.ಎಸ್. ನಾಗಭೂಷಣ

ಪುಟ: ೧೦೪, ಬೆಲೆ: ರೂ. ೫೦/-

ಪ್ರ: ಪ್ರಗತಿ ಗ್ರಾಫಿಕ್ಸ್
೧೯೯, ೩ನೇ ತಿರುವು,
೮ನೇ ಮುಖ್ಯರಸ್ತೆ, ಹಂಪಿನಗರ,
ವಿಜಯನಗರ, ಬೆಂಗಳೂರು-೪೦



ಗ್ರಂಥ ಸಂಪಾದನೆ

**ನಂದಪ್ಪದೇವರ ಪ್ರಭುಚರಿತ್ರೆ**

ಪುಟ: ೩೮೪, ಬೆಲೆ: ರೂ. ೨೦೦/-

ಪ್ರ: ಪ್ರೊ. ಎಸ್. ಉಮಾಪತಿ
ನಂ. ಸಿ. ೨, ಎರಡನೇ ಮುಖ್ಯರಸ್ತೆ
ವಿದ್ಯಾನಗರ, ದಾವಣಗೆರೆ-೫೭೭ ೦೦೫.



ಮಕ್ಕಳ ಸಾಹಿತ್ಯ

**ರೊಬೋಟೋ ಮತ್ತು ಚಿಹ್ನೆಗಳು**

ಲೇ: 'ನಾ.ಸು.' ಭರತನಹಳ್ಳಿ

ಪುಟ: ೧೩೦, ಬೆಲೆ: ರೂ. ೬೫/-

ಪ್ರ: ಅಕ್ಷಯ ಪ್ರಕಾಶನ
೨೯, ೨ನೇ ಅಡ್ಡರಸ್ತೆ, ೩ನೇ
ಮುಖ್ಯರಸ್ತೆ ಹನುಮಂತನಗರ,
ಬೆಂಗಳೂರು-೧೯



ವಿಜ್ಞಾನ ಸಾಹಿತ್ಯ

**ಆಚೆನಲೋಕಕ್ಕೆ ಕಾಲಕೋಶ**

ಲೇ: ನಾಗೇಶ ಹೆಗಡೆ

ಪುಟ: ೨೪೮, ಬೆಲೆ: ರೂ. ೧೨೦/-

ಪ್ರ: ವಸಂತ ಪ್ರಕಾಶನ, ನಂ. ೩೬೦
೧೧ ಬಿ ಮುಖ್ಯರಸ್ತೆ, ೩ನೇ ಬ್ಲಾಕ್,
ಜಯನಗರ, ಬೆಂಗಳೂರು-೧೧



ಮಾನವಿಕ

**ಮಹಿಳಾ ಚಳವಳಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ**

ಲೇ: ಡಾ॥ ಹಾಲತಿ ಸೋಮಶೇಖರ್

ಪುಟ: ೩೮೪, ಬೆಲೆ: ರೂ. ೨೫೦/-

ಪ್ರ: ವಿಸ್ಮಯ ಪ್ರಕಾಶನ
'ಮೌನ', ಎಲ್. ೭, ೧ನೇ ತಿರುವು,
೧ನೇ ಹಂತ, ಕುವೆಂಪು ನಗರ,
ಮೈಸೂರು-೫೭೦೦೨೩



ಸಂಶೋಧನೆ

**ಶಂಗಂ ತಮಿಳಗಂ ಮತ್ತು ಕನ್ನಡ ನಾಡು - ನುಡಿ**

ಲೇ: ಷ.ಶೆಟ್ಟರ್

ಪುಟ: ೩೦೮, ಬೆಲೆ: ರೂ. ೧೫೦/-

ಪ್ರ: ಅಭಿನವ, ೧೭/೮-೨
ಮೊದಲನೆಯ ಮುಖ್ಯರಸ್ತೆ,
ಮಾರೇನಹಳ್ಳಿ, ವಿಜಯನಗರ,
ಬೆಂಗಳೂರು-೪೦



ಅನುವಾದ-೧ (ಸೃಜನಶೀಲ)

**ನೆಲವೆದ್ದು ಬಡಿಯಿತು**

ಅನು: ಚಂದ್ರಕಾಂತ ಪೋಕಳೆ

ಪುಟ: ೫೩೮, ಬೆಲೆ: ರೂ. ೩೫೦/-

ಪ್ರ: ಸಾಹಿತ್ಯ ಅಕಾಡೆಮಿ
ರವೀಂದ್ರ ಭವನ, ೩೫,
ಫಿರೋಜ್ ಷಾ ರಸ್ತೆ,
ನವದೆಹಲಿ-೫೬೦ ೦೦೧




ಅನುವಾದ–೨ (ಸೃಜನೇತರ)

**ಅಧಿಕಾರ ಮೀಮಾಂಸೆ**

ಅನು: ಡಾ॥ ಪಿ.ವಿ. ನಾರಾಯಣ

ಪುಟ: ೨೬೭, ಬೆಲೆ: ರೂ. ೧೨೫/–

ಪ್ರ: ವಸಂತ ಪ್ರಕಾಶನ
ಜಯನಗರ ೩ನೇ ಬ್ಲಾಕ್,
ಬೆಂಗಳೂರು–೧೧



ಲೇಖಕರ ಮೊದಲ ಕೃತಿ

**ತತ್ರಾಣಿ** (ಕವನ ಸಂಕಲನ)

ಲೇ॥ ಬಸವರಾಜ ಹೂಗಾರ

ಪುಟ: ೮೦, ಬೆಲೆ: ರೂ. ೩೦/–

ಪ್ರ: ಲಡಾಯಿ ಪ್ರಕಾಶನ
೪೨, ಪ್ರಸಾದ ಲಾಡ್ಜ್, ಗದಗ.




ಸಂಕೀರ್ಣ

**ವಕೀಲರೊಬ್ಬರ ವಗ್ಗೈರೆಗಳು**

ಲೇ: ಸಿ.ಎಚ್. ಹನುಮಂತರಾಯ

ಪುಟ: ೬೫೨, ಬೆಲೆ: ರೂ.೪೫೦/–

ಪ್ರ: ಪತ್ರಿಕೆ ಪ್ರಕಾಶನ
೮೧೧, ಬನಶಂಕರಿ, ೩ನೇ ಘಟ್ಟ,
೭ನೇ ಬ್ಲಾಕ್, ಬೆಂಗಳೂರು–೮೫.




ಕನ್ನಡದಿಂದ ಇಂಗ್ಲಿಷಿಗೆ ಅನುವಾದ

**Origin of Christianity in and Around Srirangapattana**

ಅನು: ಪಿ.ಸಿ. ಅಂತೋಣಿಸ್ವಾಮಿ

ಪುಟ : ೨೮೪, ಬೆಲೆ : ರೂ. ೮೦/–

ಪ್ರ: ಸೇಂಟ್ ಜೋಸೆಫ್ ಕಾಲೇಜು
ಲಾಲ್‌ಬಾಗ್ ರಸ್ತೆ, ಬೆಂಗಳೂರು–೨೭.

---

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಈ ಸಾಲಿನ ಪ್ರತಿಷ್ಠಿತ ಪ್ರಶಸ್ತಿ ಪ್ರದಾನ ಸಮಾರಂಭವನ್ನು ದಿನಾಂಕ: **೨೮ನೇ ಜುಲೈ ೨೦೦೯**ರಂದು ಸಂಜೆ: **೬.೦೦** ಗಂಟೆಗೆ ಬಾಗಲಕೋಟೆ ಜಿಲ್ಲೆಯ ಜಮಖಂಡಿಯ **"ಬಸವ ಭವನ"**ದಲ್ಲಿ ನಡೆಸಲಾಗುತ್ತಿದೆ.

*ಸರ್ವರಿಗೂ ಆತ್ಮೀಯ ಸ್ವಾಗತ*

---



*ಕನ್ನಡ ನಾಡು ನುಡಿಗಾಗಿ ಗಣನೀಯ ಸೇವೆ ಸಲ್ಲಿಸಿರುವ ಹಿರಿಯರೊಬ್ಬರಿಗೆ ಸಲ್ಲುವ ಕನ್ನಡ ಸಾಹಿತ್ಯ ಪರಿಷತ್ತಿನ ಅತ್ಯುನ್ನತ ಮನ್ನಣೆಯಾದ **'ಗೌರವ ಸದಸ್ಯತ್ವ'**ಕ್ಕೆ ಪಾತ್ರರಾಗಿರುವ **ಕಯ್ಯಾರ ಕಿಞ್ಞಣ್ಣ ರೈ** ಅವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಭಿನಂದನೆಗಳು.*

***ಈ ಪ್ರತಿಷ್ಠಿತ ಗೌರವಕ್ಕೆ ಭಾಜನರಾದ ಗಣ್ಯರು***

೧. ಡಾ॥ ಕೆ.ವಿ. ಪುಟ್ಟಪ್ಪ
೨. ಶ್ರೀ ಕೆ.ಎಸ್. ನಿರಂಜನ
೩. ಡಾ॥ ಮಾಸ್ತಿ ವೆಂಕಟೇಶ ಅಯ್ಯಂಗಾರ್
೪. ಡಾ॥ ಸಿಂಪಿ ಲಿಂಗಣ್ಣ
೫. ಡಾ॥ ಪು.ತಿ. ನರಸಿಂಹಾಚಾರ್
೬. ಡಾ॥ ವಿ.ಕೃ. ಗೋಕಾಕ್ (ಮರಣೋತ್ತರ)
೭. ವ್ಯಾಕರಣತೀರ್ಥ ಚಂದ್ರಶೇಖರ ಶಾಸ್ತ್ರಿಗಳು
೮. ಪ್ರೊ. ಎಸ್.ವಿ. ಪರಮೇಶ್ವರಭಟ್ಟ
೯. ಡಾ॥ ಕೆ.ಎಸ್. ನರಸಿಂಹಸ್ವಾಮಿ
೧೦. ಶ್ರೀಮತಿ ಶಾಂತಾದೇವಿ ಮಾಳವಾಡ
೧೧. ಶ್ರೀ ಶಾಂತರಸ
೧೨. ಪ್ರೊ. ಎ.ಎನ್. ಮೂರ್ತಿರಾವ್

**ಈಗ ನಮ್ಮೊಡನಿರುವ ಗೌರವ ಸದಸ್ಯರು :**

೧. ಡಾ॥ ಪಾಟೀಲ ಪುಟ್ಟಪ್ಪ

## ಕರ್ನಾಟಕ ಸಾಹಿತ್ಯ ಅಕಾಡೆಮಿಯು ೨೦೦೮-೦೯ನೇ ಸಾಲಿನಲ್ಲಿ ನಡೆಸಿದ ಕಾರ್ಯಕ್ರಮಗಳು

| | ದಿನಾಂಕ | ಕಾರ್ಯಕ್ರಮದ ವಿವರ | ಸ್ಥಳ |
|---|---|---|---|
| ೧) | ೨೭-೧೨-೨೦೦೮ | **'ಹಾಡು ಮೂಡ್ಯಾವ ಬಾಯಾಗ'** ಶೀರ್ಷಿಕೆಯಡಿ 'ಕನ್ನಡ ಕಾವ್ಯ ವಾಚನ, ವ್ಯಾಖ್ಯಾನ, ಗಾಯನ-ಕಾರ್ಯಕ್ರಮ | ರಂಗಾಯಣ, ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ ಮೈಸೂರು |
| ೨) | ೦೯-೦೧-೨೦೦೯ | 'ಹಳಗನ್ನಡ ಕಾವ್ಯದ ಓದು ಮತ್ತು ಅರ್ಥೈಸುವ ಭಿನ್ನ ಆಯಾಮಗಳು' (ವಿಚಾರ ಸಂಕಿರಣ ಮತ್ತು ಸಂವಾದ) | ಜಿಲ್ಲಾ ಪದವಿಪೂರ್ವ ಕಾಲೇಜು ಕನ್ನಡ ಅಧ್ಯಾಪಕರ ಸಂಘ, ಚಾಮರಾಜನಗರ |
| ೩) | ೨೦-೦೧-೨೦೦೯ | 'ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನಮಾನ' (ವಿಚಾರ ಸಂಕಿರಣ ಮತ್ತು ಸಂವಾದ) | ಹರಿಹರ ಸಭಾಂಗಣ, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ |
| ೪) | ೧೧-೦೨-೨೦೦೯ | 'ಹೊಸ ಶತಮಾನಕ್ಕೆ ಕನ್ನಡ ಪರಿಭಾಷೆಯ ಸಾಧ್ಯತೆಗಳು' | ಯುರೇಕಾ ಅಕಾಡೆಮಿ, ಎಂ.ಜಿ. ರಸ್ತೆ, ಚಿಕ್ಕಮಗಳೂರು |
| ೫) | ೧೫-೦೨-೨೦೦೯ | 'ರಾಜ್ಯಮಟ್ಟದ ಮಕ್ಕಳ ಕವಿಗೋಷ್ಠಿ' | ಚೇಂಬರ್ ಆಫ್ ಕಾಮರ್ಸ್, ಗದಗ |
| ೬) | ೨೦-೦೨-೨೦೦೯ ರಿಂದ ೨೪-೦೨-೨೦೦೯ ರವರೆಗೆ | 'ಯುವ ಲೇಖಕಿಯರಿಗಾಗಿ ನಾಟಕ ರಚನಾ ತರಬೇತಿ ಶಿಬಿರ' (೫ ದಿನಗಳ ಕಮ್ಮಟ) | ಆನಂದಪುರಂ ಶ್ರೀಮಠದ ಸಮುದಾಯ ಭವನ, ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ |

## ಅಧ್ಯಕ್ಷರ ನಿಧಿಯಿಂದ ಧನ ಸಹಾಯ ಪಡೆದು ಸಂಘ-ಸಂಸ್ಥೆಗಳು ನಡೆಸಿರುವ ಸಾಹಿತ್ಯ ಚಟುವಟಿಕೆಗಳ ವಿವರ

| | ಸಂಘ-ಸಂಸ್ಥೆಗಳು | ನಡೆಸಿದ ಕಾರ್ಯಕ್ರಮಗಳು |
|---|---|---|
| ೧) | ಮಹಿಳಾ ಸಮಾಜ(ರಿ). ಕಸ್ತೂರಿಬಾ ಶಿಶುವಿಹಾರ ಆಸ್ಪತ್ರೆ ರಸ್ತೆ, ದೊಡ್ಡಬಳ್ಳಾಪುರ-೫೬೧೨೦೩ | **'ಮಹಿಳೆ-ಸಾಹಿತ್ಯ-ಪರಿಸರ'** ಕುರಿತು ೨ ದಿನಗಳ ಕಮ್ಮಟ |
| ೨) | ಡಾ. ಎಚ್.ಜಿ. ಶ್ರೀಧರ, ಕಡವ ಶಂಭುಶರ್ಮ ಸ್ಮಾರಕ ಪ್ರತಿಷ್ಠಾನ, ಸಿರಿಗಂಧ, ವಿದ್ಯಾನಗರ ಅಂಚೆ: ನೆಹರುನಗರ, ಪುತ್ತೂರು, ದ..ಕ. | **'ಕಡವ ಶಂಭುಶರ್ಮ ಕೃತಿಸಂಭ್ರಮ ಮತ್ತು ಗ್ರಂಥ ಲೋಕಾರ್ಪಣೆ ಸಮಾರಂಭ',** ನಯನ ಸಭಾಂಗಣ, ಬೆಂಗಳೂರು |
| ೩) | ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಪರಿಷತ್ತು ಬ್ಯಾಂಕ್ ಕಾಲನಿ, ಶರಾವತಿನಗರ, ಶಿವಮೊಗ್ಗ | 'ಲಂಕೇಶ್ ಒಂದು ನೆನಪು' ಕಾರ್ಯಕ್ರಮ |
| ೪) | ಅಧ್ಯಕ್ಷರು, ನಮ್ಮ ಬಳಗ, ಕರಜಗಿ, ತಾ: ಅಕ್ಕಲಕೋಟ ಸೊಲ್ಲಾಪುರ ಜಿಲ್ಲೆ-೪೧೩೨೦೯ | **'ಶರಣ ಗಜೇಶ ಮಸಣಯ್ಯ ದಂಪತಿಗಳು' –** ವಿಚಾರ ಸಂಕಿರಣ ಹಾಗೂ ಕವಿಗೋಷ್ಠಿ-ಕರಜಗಿ |

## ೨೦೦೮-೦೯ನೇ ಸಾಲಿನಲ್ಲಿ ಅಕಾಡೆಮಿಯಿಂದ ಸಂಘ-ಸಂಸ್ಥೆಗಳಿಗೆ ಧನಸಹಾಯ ನೀಡಿರುವ ವಿವರ

| ಸಂಘ-ಸಂಸ್ಥೆಗಳು | ನಡೆಸಿದ ಕಾರ್ಯಕ್ರಮಗಳು |
|---|---|
| ೧) **ಜನದನಿ,** ಮಂಡ್ಯ | 'ಲೇಖಕಿಯರ ಸಮ್ಮೇಳನ' ಕಾರ್ಯಕ್ರಮ, ಮಂಡ್ಯ |
| ೨) **ಮುದ್ದಪ್ಪ ಸ್ಮಾರಕ ಟ್ರಸ್ಟ್,** ಬೆಂಗಳೂರು | 'ಮಾಧ್ಯಮಗಳು ಪರ್ಯಾಯ ಹುಡುಕಾಟ', ರಾಮನಗರ |
| ೩) **ಬೆಂಗಳೂರು ವಿಶ್ವವಿದ್ಯಾಲಯ ಕಾಲೇಜು ಕನ್ನಡ ಅಧ್ಯಾಪಕರ ಒಕ್ಕೂಟ,** ಬೆಂಗಳೂರು | 'ಕನ್ನಡ ಸಂಸ್ಕೃತಿ ಸಂವರ್ಧನೆ' : ಸಂವಾದ ಕಾರ್ಯಕ್ರಮ, ಬೆಂಗಳೂರು |
| ೪) **ಕಾರ್ಕಳ ಸಾಹಿತ್ಯ ಸಂಘ,** ಕಾರ್ಕಳ. | 'ಜಿ.ಪಿ. ರಾಜರತ್ನಂ ಶತಾಬ್ದಿ ಸಂಸ್ಮರಣ- ಸಾಹಿತ್ಯ ಸಂಕಿರಣ, ಸಂಭ್ರಮ ಸಭಾಮಂದಿರ ಹೋಟೆಲ್ ಪ್ರಕಾಶ್, ಕಾರ್ಕಳ |
| ೫) **ಕರ್ನಾಟಕ ರಂಗಜಾಗೃತಿ ಪರಿಷತ್ತು** (ರಿ) ಬೆಂಗಳೂರು | 'ನಾಟಕ ಕರ್ನಾಟಕ-೦೯ ರಂಗಸಮ್ಮೇಳನ' ಕಾರ್ಯಕ್ರಮದಲ್ಲಿ ಅಕಾಡೆಮಿ ವತಿಯಿಂದ ಕವಿಗೋಷ್ಠಿ ಕಾರ್ಯಕ್ರಮ, ಬೆಂಗಳೂರು |
| ೬) **ಕನ್ನಡ ವಿಭಾಗ,** ಮುಂಬಯಿ | 'ಅನುಭಾವ ಸಾಹಿತ್ಯದ ಹೆಜ್ಜೆ ಹಾದಿ" ರಾಷ್ಟ್ರೀಯ ವಿಚಾರ ಸಂಕಿರಣ ಮುಂಬಯಿ ವಿಶ್ವವಿದ್ಯಾಲಯ |
| ೭) **ಕೆ.ಆರ್. ಬೆಲ್ಲದ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ** ಮುಂಡರಗಿ-೫೮೨೧೧೮, ಗದಗ ಜಿಲ್ಲೆ | 'ಹಳಗನ್ನಡ ಓದು' ಕಾರ್ಯಾಗಾರ |

## ಶ್ರದ್ಧಾಂಜಲಿ



ಹಿರಿಯ ಪತ್ರಕರ್ತೆ, ಸಾಹಿತಿ ಬಿ.ಎಸ್. ವೆಂಕಟಲಕ್ಷ್ಮಿ (೬೩) ದಿನಾಂಕ: ೨೬-೬-೨೦೦೯ರಂದು ನಿಧನರಾದರೆಂದು ತಿಳಿಸಲು ವಿಷಾಧವಾಗುತ್ತಿದೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯು ಅಗಲಿದ ಲೇಖಕಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಿದೆ.



ಹಿರಿಯ ಕವಿ, ಕಥೆಗಾರ, ವಿಮರ್ಶಕ ದೇಶ ಕುಲಕರ್ಣಿ (೭೧) ದಿನಾಂಕ: ೧೪-೦೪-೨೦೦೯ರಂದು ನಮ್ಮನ್ನು ಅಗಲಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯು ನಮ್ಮಿಂದ ದೂರವಾದ ಹಿರಿಯ ಚೇತನಕ್ಕೆ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಿದೆ.




# ಕರ್ನಾಟಕ ಸಾಹಿತ್ಯ ಅಕಾಡೆಮಿ ಅಂತರಜಾಲ ಆರಂಭ

**ಕ**ನ್ನಡ ಸಾಹಿತ್ಯ ಮತ್ತು ಸಾಹಿತಿಗಳ ವಿವರ ಬೇಕೆ? ಹಾಗಾದರೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಆರಂಭಿಸಿರುವ ಅಂತರಜಾಲ www. karnatakasahithyaacademy.org ಗೆ ಭೇಟಿ ಕೊಡಿ.

ಜಗತ್ತಿನಾದ್ಯಂತ ಹರಡಿರುವ ಆಸಕ್ತ ಕನ್ನಡಿಗರು ಅಕಾಡೆಮಿಯ ಕಾರ್ಯೋದ್ದೇಶಗಳು ಮತ್ತು ಕಾರ್ಯಚಟುವಟಿಕೆ ಗಳನ್ನು ವೀಕ್ಷಿಸಲು ಮತ್ತು ಸಾಹಿತ್ಯವನ್ನು ಓದಿಕೊಳ್ಳಲು ಅನುಕೂಲ ವಾಗುವಂತೆ ಅಂತರ್ಜಾಲ ಅಭಿವೃದ್ಧಿ ಪಡಿಸಲಾಗಿದೆ.



ಕನ್ನಡ ಮತ್ತು ಇಂಗ್ಲಿಷ್ ಆವೃತ್ತಿಗಳಲ್ಲಿದ್ದು, ಇಂಗ್ಲಿಷ್ ಆವೃತ್ತಿ ಇನ್ನೂ ಅಭಿವೃದ್ಧಿ ಪಡಿಸಬೇಕಿದೆ. ಕನ್ನಡ ಆವೃತ್ತಿ ಜುಲೈ 3ರಂದು ಉದ್ಘಾಟನೆ ಯಾಗಲಿದೆ.

ವೆಬ್‌ಸೈಟ್‌ನಲ್ಲಿ ಏನಿದೆ?: ಅಕಾಡೆಮಿ ಆಡಳಿತ, ಕಾರ್ಯ ಚಟುವಟಿಕೆಗಳ ಜೊತೆಗೆ ಕನ್ನಡ ಸಾಹಿತಿಗಳ ವಿಳಾಸ, ಹಿರಿಯ ಕವಿಗಳ ಕವನ ವಾಚನ, ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದ ವಿವರಗಳು ಲಭ್ಯ. ರಾಷ್ಟ್ರಕವಿ ಜಿ. ಎಸ್. ಶಿವರುದ್ರಪ್ಪ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ॥ ಯು.ಆರ್. ಅನಂತಮೂರ್ತಿ, ಡಾ॥ ಚಂದ್ರಶೇಖರ ಕಂಬಾರ, ಕೆ.ಎಸ್. ನಿಸಾರ್ ಅಹಮದ್, ಡಾ॥ ಸಿದ್ದಲಿಂಗಯ್ಯ ಅವರು ತಾವೇ ಆಯ್ದುಕೊಂಡ ಐದು ಕವನಗಳ ವಾಚನ ದೃಶ್ಯ ಮತ್ತು ಶ್ರವ್ಯ ರೂಪವಾಗಿ ಸಿಗುತ್ತದೆ. ಕನ್ನಡ ಸಾಹಿತಿಗಳ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ ಲಭ್ಯವಿದೆ. ಜಿಲ್ಲಾವಾರು ಸಾಹಿತಿಗಳ ವಿವರವೂ ಇದೆ. 'ಹುಡುಕು' ತಾಣವಿದ್ದು ಯಾವುದೇ ಅಕ್ಷರ ಟೈಪ್ ಮಾಡಿದರೆ, ಆ ಹೆಸರಿನ ಸಾಹಿತಿಗಳು, ಕವಿಗಳ ವಿವರ ಬರಲಿದೆ.

ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ವಿವರ, ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಆರಂಭದಿಂದ ಈವರೆಗೆ ಪ್ರಶಸ್ತಿ ಪಡೆದ ಕನ್ನಡ ಸಾಹಿತಿಗಳು, ಕೃತಿ, ವರ್ಷದ ವಿವರ ಹಾಗೂ ರಾಜ್ಯ ಅಕಾಡೆಮಿ ಯಲ್ಲಿ ಯಾವ ಯಾವ ಪ್ರಶಸ್ತಿಗಳಿವೆ ಯಾರು, ಯಾವ ವರ್ಷದಲ್ಲಿ ಯಾವ ಕೃತಿಗೆ ಪ್ರಶಸ್ತಿ ಪಡೆದರು ಎಂಬ ವಿವರವೂ ಲಭ್ಯವಿದೆ.

'ಕನ್ನಡ ಸಾಹಿತ್ಯ ಮತ್ತು ಸಾಹಿತಿಗಳ ಬಗ್ಗೆ ವಿವರ ನೀಡುವ ವೆಬ್‌ಸೈಟ್ ಆರಂಭಿಸಿದ್ದು ಇದೇ ಮೊದಲು. ಮುಖ್ಯವಾಗಿ ಶಾಲಾ ಮಕ್ಕಳು ಮತ್ತು ಹೊರ ರಾಜ್ಯ ಮತ್ತು ವಿದೇಶಗಳಲ್ಲಿ ನೆಲೆಸಿರುವ ಕನ್ನಡಿಗರನ್ನು ದೃಷ್ಟಿಯಲ್ಲಿಟ್ಟುಕೊಂಡು ವೆಬ್‌ಸೈಟ್ ಅಭಿವೃದ್ಧಿ ಪಡಿಸಲಾಗಿದೆ' ಎನ್ನುತ್ತಾರೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಪ್ರೊ. ಎಂ.ಎಚ್. ಕೃಷ್ಣಯ್ಯ.

ಇಂದು ಎಲ್ಲಾ ಶಾಲೆ ಗಳಲ್ಲೂ ಕಂಪ್ಯೂಟರ್ ಲ್ಯಾಬ್ ಇರುತ್ತದೆ. ಶಿಕ್ಷಕರು ಪಾಠ ಮಾಡುವಾಗ ಯಾವುದೋ ಕವಿ ಬರೆದ ಪದ್ಯವನ್ನು ಓದಿ ಹೇಳುತ್ತಾರೆ.

ಅದರ ಜೊತೆಗೆ ವೆಬ್‌ಸೈಟ್ ಮೂಲಕ ಆ ಕವಿಯೇ ತನ್ನ ಪದ್ಯ ಓದುತ್ತಿರುವುದು ಕೇಳಿದರೆ ಮಕ್ಕಳ ಮೇಲೆ ಹೆಚ್ಚಿನ ಪ್ರಭಾವ ಬೀರುತ್ತದೆ. ವಿದೇಶಗಳಲ್ಲಿ ನೆಲೆಸಿರುವವರೂ ರಾಜ್ಯದ ಸಾಹಿತ್ಯ ಚಟುವಟಿಕೆಗಳ ಬಗ್ಗೆ ನಿರಂತರವಾಗಿ ತಿಳಿಯಲು ನೆರವಾಗುತ್ತದೆ.

ವೆಬ್‌ಸೈಟನ್ನು ನಿರಂತರವಾಗಿ ಅಭಿವೃದ್ಧಿಪಡಿಸಲಾಗುತ್ತದೆ. ಈಗ ಸದ್ಯ ಲಭ್ಯವಿದ್ದ ವಿವರಗಳನ್ನಷ್ಟೇ ಸೇರಿಸಲಾಗಿದೆ. ಮುಂದೆ ಎಲ್ಲಾ ಸಾಹಿತಿಗಳ ಸಾಹಿತ್ಯ ಪಥ ಮತ್ತು ಜೀವನ ಪಥ, ಹಲವಾರು ಕವಿಗಳ ಕವನ ವಾಚನ ಸೇರಿಸಲಾಗುತ್ತದೆ ಎಂದು ವಿವರಿಸುತ್ತಾರೆ ಅವರು.

*ಸೌಜನ್ಯ : **'ದಿ ಟೈಮ್ಸ್ ಆಫ್ ಇಂಡಿಯಾ'***
*ಶುಕ್ರವಾರ, ಜುಲೈ ೩, ೨೦೦೯*

# ಸಾಹಿತ್ಯ ಅಕಾಡೆಮಿಯ ವೆಬ್‌ಸೈಟ್‌ಗೆ ಚಾಲನೆ

**ವಿ**ನೂತನ ಮಾದರಿಯ ತಂತ್ರಜ್ಞಾನವನ್ನು ಬಳಸುವ ಮೂಲಕ ಯುವಜನರನ್ನು ಸಾಹಿತ್ಯ ಮತ್ತು ಸಂಸ್ಕೃತಿಯತ್ತ ಸೆಳೆಯಬೇಕಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಬಿ.ಆರ್. ಜಯರಾಮರಾಜೇ ಅರಸ್ ಹೇಳಿದರು.

ಕನ್ನಡ ಭವನದ ನಯನ ಸಭಾಂಗಣದಲ್ಲಿ ಶುಕ್ರವಾರ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಂತರ್ಜಾಲ ತಾಣಕ್ಕೆ ಚಾಲನೆ ನೀಡಿದ ಬಳಿಕ ಅವರು ಮಾತನಾಡಿದರು.



**ಕರ್ನಾಟಕ ಸಾಹಿತ್ಯ ಅಕಾಡೆಮಿಯು ಶುಕ್ರವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಅಕಾಡೆಮಿಯ ಅಂತರ್ಜಾಲ ತಾಣವನ್ನು ಉದ್ಘಾಟಿಸಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಜಯರಾಮರಾಜೇ ಅರಸ್, ಅಕಾಡೆಮಿಯ ಅಧ್ಯಕ್ಷ ಪ್ರೊ. ಎಂ.ಎಚ್. ಕೃಷ್ಣಯ್ಯ, ಇಲಾಖೆಯ ನಿರ್ದೇಶಕ ಮನು ಬಳಿಗಾರ್ ಹಾಗೂ ತಾಂತ್ರಿಕ ಸಲಹೆಗಾರ ಎನ್. ವಿದ್ಯಾಶಂಕರ್ ವೇದಿಕೆಯಲ್ಲಿದ್ದಾರೆ.**

'ನಗರ ಪ್ರದೇಶಗಳಲ್ಲಿ ವಾಸಿಸುವ ಯುವಕರು ಮತ್ತು ಯುವತಿಯರು ಓದುವ ಅಭಿರುಚಿ ಕಳೆದು ಕೊಳ್ಳುತ್ತಿದ್ದಾರೆ. ಸಾಹಿತ್ಯದತ್ತ ನಿರಾಸಕ್ತಿ ಮೂಡಿಸಿ ಕೊಳ್ಳುತ್ತಿದ್ದಾರೆ'.

'ಇವೆಲ್ಲದರ ಹಿನ್ನೆಲೆಯಲ್ಲಿ ವಿಭಿನ್ನಮಾರ್ಗದ ಮೂಲಕ ಅವರಿಗೆ ಸಾಹಿತ್ಯದ ಸೊಗಸು ಮತ್ತು ಮೌಲ್ಯ ತಿಳಿಸಬೇಕಿದೆ, ಎಂದು ಅರಸ್ ಹೇಳಿದರು.

'ಅಂತರ್ಜಾಲ ತಾಣಗಳನ್ನು ಆರಂಭಿಸುವ ಮತ್ತು ನೂತನ ತಂತ್ರಜ್ಞಾನದ ನೆರವು ಪಡೆಯುವ ಮೂಲಕ ಸಾಹಿತ್ಯದ ಪ್ರಚಾರ ಮಾಡಬೇಕು. ಈ ರೀತಿಯ ಕ್ರಮಕೈಗೊಳ್ಳಲು ಇತರ ಅಕಾಡೆಮಿಗಳು ಮತ್ತು ಪ್ರಾಧಿಕಾರಗಳು ಸಹ ಮುಂದಾಗಬೇಕು' ಎಂದರು.

ಸಾಹಿತ್ಯ ಮತ್ತು ಸಂಸ್ಕೃತಿಯ ಅಭಿವೃದ್ಧಿಗೆ ಸರ್ಕಾರ ಬದ್ಧವಿದೆ ಎಂದು ಹೇಳಿದ ಅರಸ್, 'ವಿನೂತನ ಕಾರ್ಯಗಳ ಕುರಿತು ಅಕಾಡೆಮಿಗಳು ಮತ್ತು ಪ್ರಾಧಿಕಾರಿಗಳು ಆಸಕ್ತಿ ತೋರಿದ್ದಲ್ಲಿ, ಅಗತ್ಯ ನೆರವು ನೀಡಲು ಸರ್ಕಾರ ಸಿದ್ಧವಿದೆ' ಎಂದರು.

ಇಲಾಖೆ ನಿರ್ದೇಶಕ ಮನು ಬಳಿಗಾರ್ ಮಾತನಾಡಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಉತ್ತಮ ರೀತಿಯಲ್ಲಿ ಕಾರ್ಯ ಮಾಡುತ್ತಿದೆ. ಹೊಸ ಪ್ರಯೋಗಗಳನ್ನು ಮಾಡುವ ಮೂಲಕ ವೈಶಿಷ್ಟ್ಯವನ್ನು ಮೆರೆದಿದೆ' ಎಂದರು.

ಅಂತರ್ಜಾಲ ತಾಣದ ಕುರಿತು ಮಹಿತಿ ನೀಡಿದ ಅಕಾಡೆಮಿ ಅಧ್ಯಕ್ಷ ಪ್ರೊ. ಎಂ. ಎಚ್. ಕೃಷ್ಣಯ್ಯ, 'ಅಕಾಡೆಮಿಯ ತಾಣದಲ್ಲಿ ಸಾಹಿತಿಗಳ ಮತ್ತು ವಿಳಾಸ ಅಳವಡಿಸಲಾಗಿದೆ. ಪ್ರಶಸ್ತಿ ಪುರಸ್ಕಾರ ಮಾಹಿತಿ ಒಳಗೊಂಡಿದೆ. ಕವಿಗಳು ತಮ್ಮ ಕವನಗಳನ್ನು ವಾಚಿಸಿರುವ ವಿಡಿಯೋ ಸಹ ವೀಕ್ಷಿಸಬಹುದು' ಎಂದರು.

ಅಂತರ್ಜಾಲ ತಾಣ ವ್ಯವಸ್ಥೆಯ ಸಲಹೆಗಾರ ಎನ್. ವಿದ್ಯಾಶಂಕರ್, ಅಕಾಡೆಮಿ ರಿಜಿಸ್ಟ್ರಾರ್ ವಿ. ಎನ್. ಮಲ್ಲಿಕಾರ್ಜುನಸ್ವಾಮಿ ಉಪಸ್ಥಿತರಿದ್ದರು.

***ಅಂತರ್ಜಾಲ ತಾಣ ವಿಳಾಸ:***

***www. karnatakasahithyaacademy.org***

*ಕೃಪೆ : **ಪ್ರಜಾವಾಣಿ***

*ಶನಿವಾರ, ಜುಲೈ ೪, ೨೦೦೯*



*ಪ್ರಸಕ್ತ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸಹ ಆಯ್ಕೆ ಸದಸ್ಯರಾಗಿರುವ ಡಾ. ಶಿವಾನಂದ ಕೆಳಗಿನಮನಿಯವರು ರಚಿಸಿರುವ 'ಮಾದಾರ ಚೆನ್ನಯ್ಯ – ಬಹುಮುಖಿ ಅಧ್ಯಯನ' ಗ್ರಂಥಕ್ಕೆ ೨೦೦೯ನೇ ಸಾಲಿನ 'ಹಳಕಟ್ಟಿ ಶ್ರೀ' ಪ್ರಶಸ್ತಿ ಲಭಿಸಿದೆ. ಇವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಭಿನಂದನೆಗಳು.*

# ಸಾಹಿತ್ಯ ಅಕಾಡೆಮಿ ಅಂತರ್ಜಾಲ ತಾಣಕ್ಕೆ ಚಾಲನೆ

**ಮಾ**ಹಿತಿ ತಂತ್ರಜ್ಞಾನ ಬಳಸಿಕೊಂಡು, ಕನ್ನಡ ಸಾಹಿತ್ಯವನ್ನು ಯುವ ಪೀಳಿಗೆಗೆ ತಲುಪಿಸಬೇಕು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಬಿ.ಆರ್. ಜಯರಾಮರಾಜೇ ಅರಸ್ ಹೇಳಿದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ರೂಪಿಸಿರುವ ಅಂತರ್ಜಾಲ ತಾಣ www.karnatakasahithyaacademy.org ಅನ್ನು ಉದ್ಘಾಟಿಸಿ ಶುಕ್ರವಾರ ಮಾತನಾಡಿ, ಕನ್ನಡ ಸಾಹಿತ್ಯದ ಬಗ್ಗೆ ಯುವಪೀಳಿಗೆ, ನಗರವಾಸಿಗಳು ಮತ್ತು ಇಂಗ್ಲಿಷ್ ಮಾಧ್ಯಮದ ವಿದ್ಯಾರ್ಥಿಗಳಲ್ಲಿ ಆದರ ಕಡಿಮೆಯಾಗುತ್ತಿದೆ. ಸಾಹಿತ್ಯ ಪ್ರಸಾರಕ್ಕೆ ತಂತ್ರಜ್ಞಾನ ಬಳಕೆ ಮಾಡುವ ಮೂಲಕ ಅಕಾಡೆಮಿ ಮಹತ್ವದ ಹೆಜ್ಜೆ ಇಟ್ಟಿದೆ ಎಂದು ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಮನು ಬಳಿಗಾರ್ ಮಾತನಾಡಿ, ಕನ್ನಡ ಸಾಹಿತ್ಯವನ್ನು ತಂತ್ರಜ್ಞಾನಕ್ಕೆ ಅಳವಡಿಸುವಲ್ಲಿ ನಾವು ಹಿಂದಿದ್ದೇವೆ. ಜಾಗತೀಕರಣದ ಒತ್ತಡದಿಂದ ಕನ್ನಡ ಉಳಿಯಬೇಕಿದ್ದರೆ, ಸಾಹಿತ್ಯ ತಂತ್ರಜ್ಞಾನದ ನೆರವು ಪಡೆದುಕೊಳ್ಳಬೇಕು ಎಂದರು.

ಅಕಾಡೆಮಿ ಅಧ್ಯಕ್ಷ ಪ್ರೊ. ಎಂ.ಎಚ್.ಕೃಷ್ಣಯ್ಯ ಮಾತನಾಡಿ, ಕನ್ನಡ ಸಾಹಿತ್ಯವನ್ನು ಅಂತರ್ಜಾಲದಲ್ಲಿ ಅಳವಡಿಸಲು ನನ್ನ ಮೊಮ್ಮಗಳೇ ಪ್ರೇರಣೆ. ಜ್ಞಾನಪೀಠ, ಕೇಂದ್ರ ಸಾಹಿತ್ಯ ಅಕಾಡೆಮಿ ಮತ್ತು ಕಬೀರ್ ಸಮ್ಮಾನ್ ಪುರಸ್ಕೃತರು, ಅಕಾಡೆಮಿ ಪುಸ್ತಕಗಳ ವಿವರ, ಲೇಖಕರ ವಿಳಾಸ ಮತ್ತಿತರ ವಿಷಯ ಅಳವಡಿಸಲಾಗಿದೆ ಎಂದು ತಿಳಿಸಿದರು.

ಸುಚಿತ್ರಾ ಅಕಾಡೆಮಿಯ ಎನ್. ವಿದ್ಯಾಶಂಕರ್, ಕರ್ನಾಟಕ ಸಾಹಿತ್ಯ ಅಕಾಡೆಮಿ ರಿಜಿಸ್ಟ್ರಾರ್ ವಿ.ಎನ್. ಮಲ್ಲಿಕಾರ್ಜುನಸ್ವಾಮಿ ಉಪಸ್ಥಿತರಿದ್ದರು.

*ಕೃಪೆ : **ವಿಜಯ ಕರ್ನಾಟಕ***
*ಶನಿವಾರ, ಜುಲೈ ೪, ೨೦೦೯*

# ಹಸ್ತಪ್ರತಿಗಳ ಅಧ್ಯಯನಕ್ಕೆ ಸಲಹೆ

**ನೆಲಮಂಗಲ :** ಕಾಲಗರ್ಭದಲ್ಲಿ ಮರೆಯಾಗುತ್ತಿರುವ ಹಸ್ತಪ್ರತಿಗಳನ್ನು ಸಂರಕ್ಷಿಸಿ ಸಾಹಿತ್ಯಕ ದೃಷ್ಟಿಯಿಂದಷ್ಟೇ ಅಲ್ಲದೆ ಜನ ಕಲ್ಯಾಣದ ದೃಷ್ಟಿಯಿಂದ ಅಧ್ಯಯನ ಮಾಡಬೇಕು ಎಂದು ಕೋಲಾರ ಸ್ನಾತಕೋತ್ತರ ಕೇಂದ್ರದ ಪ್ರಾಧ್ಯಾಪಕ ಡಾ॥ ಸಿ. ನಾಗಭೂಷಣ್ ಅಭಿಪ್ರಾಯಪಟ್ಟರು.

ಶಿವಗಂಗೆಯ ಮೇಲಣ ಗವಿಮಠದಲ್ಲಿ ಸಾಹಿತ್ಯ ಅಕಾಡೆಮಿಯು ಕರ್ನಾಟಕ ಸಾಹಿತ್ಯ ಪರಿಷತ್ತಿನ ಸಹಯೋಗದಲ್ಲಿ ಹಮ್ಮಿಕೊಂಡಿರುವ ಸಂಶೋಧನೆಯ ಹೊಸ ಸಾಧ್ಯತೆಗಳ ಕುರಿತ ಮೂರು ದಿನಗಳ ಅಧ್ಯಯನ ಕಮ್ಮಟದಲ್ಲಿ ಶನಿವಾರ ಗ್ರಂಥ ಸಂಪಾದನೆ ಮತ್ತು ಹಸ್ತಪ್ರತಿ ಶಾಸ್ತ್ರದ ಕುರಿತು ಮಾತನಾಡಿದ ಅವರು ಕಾಲನಿರ್ಣಯಕ್ಕೆ ಹಸ್ತಪ್ರತಿಗಳು ಸಹಾಯಕ ಎಂದರು.

ಅಲಕ್ಷಿತ ಸಾಹಿತ್ಯ ಕುರಿತು ಮಾತನಾಡಿದ ರಂಗಕರ್ಮಿ ಸಿದ್ದಗಂಗಯ್ಯ ಕಂಬಾಳು ಅವರು ಬದುಕಿಗೆ ಅಗತ್ಯವಾದ ಅನುಭವ ಶಾಸ್ತ್ರ ಅಲಕ್ಷ್ಯಕ್ಕೆ ಒಳಗಾಗಿದೆ. ವೈದ್ಯ – ಶಕುನ – ನೀತಿಶಾಸ್ತ್ರಗಳ ಬಗ್ಗೆ ಅವಜ್ಞೆ ಇಂದಿನ ಅವಸ್ಥೆಗೆ ಕಾರಣ ಎಂದು ವಿವರಿಸಿದರು.

ಸಂಶೋಧನೆ ಮರುಪರಿಶೀಲನೆ ಬಗ್ಗೆ ಸೀತಾರಾಮ ಜಹಗೀರ್‌ದಾರ್, ಪ್ರಾಚೀನ ಸಾಹಿತ್ಯ ಕುರಿತು ಡಾ॥ ಎನ್.ಎಸ್. ತಾರಾನಾಥ್, ಶಾಸನ ಶಾಸ್ತ್ರದ ಬಗ್ಗೆ ಡಾ॥ ಬಿ. ರಾಜಶೇಖರಪ್ಪ, ನಿಘಂಟು ಶಾಸ್ತ್ರದ ಬಗ್ಗೆ ಪ್ರೊ. ಎನ್.ಬಸವಾರಾಧ್ಯ ಪ್ರಬಂಧ ಮಂಡಿಸಿದರು.

ಡಾ॥ ಎಂ.ಜಿ. ಮಂಜುನಾಥ್, ಡಾ॥ ಸಿ.ವೀರಣ್ಣ, ಡಾ॥ ಎಚ್.ಎಸ್. ಗೋಪಾಲರಾವ್, ಕಲ್ಯಾಣ ಸಹಕಾರಿ ಬ್ಯಾಂಕ್ ಅಧ್ಯಕ್ಷ ಕೆಂಪರಾಜು, ಶ್ರೀಮಲಯ ಶಾಂತಮುನಿ ಸ್ವಾಮೀಜಿ ವೇದಿಕೆಯಲ್ಲಿದ್ದರು. ಕವಿ ಎಲ್.ಎನ್. ಮುಕುಂದರಾಜ್ ಸ್ವಾಗತಿಸಿದರು. ಅಕಾಡೆಮಿ ರಿಜಿಸ್ಟ್ರಾರ್ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ ವಂದಿಸಿದರು. ಸಂಜೆ ಕೆ.ವಿ. ನಾಗರಾಜಮೂರ್ತಿ ನಿರ್ದೇಶನದಲ್ಲಿ ಸಿಂಗರಾಜ ರಂಗ ರೂಪಕ ಪ್ರದರ್ಶಿಸಲಾಯಿತು.

*ಸೌಜನ್ಯ : **ಪ್ರಜಾವಾಣಿ***
*ಸೋಮವಾರ, ಜೂನ್ ೨೯, ೨೦೦೯*

n

# ‘ಅಡುಗೆ ಮನೆಯೇ’ ಆರೋಗ್ಯದ ಮೂಲ

**ಶಿವಮೊಗ್ಗ :** ಇಂದಿನ ಜೀವನಶೈಲಿಗಳ ಕೆಟ್ಟಪದ್ಧತಿಗಳಿಂದ ನಾವೆಲ್ಲ ಬಳಲುತ್ತಿದ್ದೇವೆ. ‘ಅಡುಗೆ ಮನೆ’ಯೇ ನಮ್ಮೆಲ್ಲರ ಆರೋಗ್ಯದ ಮೂಲ ಎಂಬುದನ್ನು ಮರೆಯಬಾರದು ಎಂದು ವೈದ್ಯ ಸಾಹಿತಿ ಡಾ॥ ಪಿ.ಎಸ್. ಶಂಕರ್ ಹೇಳಿದರು.

ರವಿವಾರ ನಗರದ ಅಂಬೇಡ್ಕರ್ ಭವನದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಮತ್ತು ಭಾರತೀಯ ವೈದ್ಯಕೀಯ ಸಂಘದ ಸಹಯೋಗದಲ್ಲಿ ಏರ್ಪಡಿಸಿದ್ದ ರಾಜ್ಯಮಟ್ಟದ ವೈದ್ಯಕೀಯ ಸಾಹಿತ್ಯ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ನಮ್ಮ ಜೀವನ ಶೈಲಿಯಲ್ಲಿ ಆಗುತ್ತಿರುವ ಬದಲಾವಣೆಗೆ ಅನುಗುಣವಾಗಿ ಕಾಯಿಲೆಗಳು ಬರುತ್ತಿವೆ. ಸದ್ಯಕ್ಕೆ ‘ಹಂದಿ ರೋಗ’ ಎಂಬುದು ಜಗತ್ತಿನೆಲ್ಲೆಡೆ ಚರ್ಚಿತ ರೋಗವಾಗಿದೆ. ‘ಹಕ್ಕಿ ಹಾರುತಿದೆ ನೋಡಾ’ ಎಂಬ ಕವನವನ್ನು ‘ಹಂದಿ ಹಾರುತಿದೆ ನೋಡಾ’ ಎಂದು ಹೇಳಬಹುದು. ವೈರಸ್ ಮೂಲಕ ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಹಂದಿಜ್ವರ ಹರಿದಾಡುತ್ತಿದೆ ಎಂದರು.

ಎಲ್ಲ ಕಾಯಿಲೆಗಳಿಗೆ ಮೂಲವೇ ಈ ಜೀವನ ಶೈಲಿ. ಮನುಷ್ಯನ ದೈಹಿಕ, ಮಾನಸಿಕ, ಆಧ್ಯಾತ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸ್ವರೂಪವನ್ನು ಆರೋಗ್ಯ ಬಿಂಬಿಸುತ್ತದೆ. ಜೀವನ ಎಂದರೆ ಬರಿ ಬದುಕುವುದಲ್ಲ. ಆರೋಗ್ಯದಿಂದ ಬದುಕುವುದೇ ಅರ್ಥಪೂರ್ಣ ಜೀವನವಾಗಿದೆ.

ಜೀವನಶೈಲಿ ಯಾವಾಗಲೂ ನಿಸರ್ಗವನ್ನು ಅವಲಂಬಿಸಿರಬೇಕು. ವೈದ್ಯಕಲೆ ಯಾವಾಗಲೂ ನಿಸರ್ಗಕ್ಕೆ ಸಹಕಾರಿಯಾಗಿರಬೇಕು. ವೈದ್ಯನಾದವನು ನಿಸರ್ಗದ ಅಣತಿಯಂತೆ ನಡೆಯಬೇಕೆ ಹೊರತು ಅದಕ್ಕೆ ಯಜಮಾನನಾಗಿ ವರ್ತಿಸಬಾರದು ಎಂದು ಸಲಹೆ ನೀಡಿದರು.

ಕಾರ್ಯಕ್ರಮ ಉದ್ಘಾಟಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಪ್ರೊ. ಎಂ.ಎಚ್. ಕೃಷ್ಣಯ್ಯ ಮಾತನಾಡಿ, ಸಾಹಿತ್ಯಕ್ಕೂ ಮನೋವಿಜ್ಞಾನಕ್ಕೂ ನಿಕಟವಾದ ಸಂಬಂಧವಿದೆ. ಅಜ್ಞಾನ, ಮೂಢನಂಬಿಕೆ ತುಂಬಿ ತುಳುಕುತ್ತಿರುವ ಈ ಸಂದರ್ಭದಲ್ಲಿ ವೈದ್ಯ ಸಾಹಿತ್ಯ ಸಮ್ಮೇಳನ ಏರ್ಪಡಿಸಿರುವುದು ವೈಜ್ಞಾನಿಕ ಆಲೋಚನೆ ಮಾಡಲು ಪ್ರೇರಣೆಯಾಗಿದೆ ಎಂದರು.

ಆದರೆ ವೈದ್ಯಕೀಯ ಸಾಹಿತ್ಯ ಸಮ್ಮೇಳನಕ್ಕೂ ಸಾರ್ವಜನಿಕರಿಗೂ ಸಂಬಂಧವೇ ಇಲ್ಲವೆಂಬ ತಪ್ಪು ತಿಳಿವಳಿಕೆ ಇದೆ. ಈ ಕಾರಣದಿಂದಲೇ ಸಮ್ಮೇಳನದಲ್ಲಿ ಸಾರ್ವಜನಿಕರೇ ಕಾಣುತ್ತಿಲ್ಲ. ಡಾ॥ ಸಿ.ಆರ್. ಚಂದ್ರಶೇಖರ್, ಡಾ॥ ನಾ.ಸೋಮೇಶ್ವರ, ಡಾ॥ ಪಿ.ಎಸ್.ಶಂಕರ್ ಅವರಂಥ ವೈದ್ಯಸಾಹಿತಿಗಳು ಅತ್ಯಂತ ಸರಳ ಭಾಷೆಯಲ್ಲಿ ಆರೋಗ್ಯದ ಬಗ್ಗೆ ಪ್ರಕಟವಾಗುತ್ತಿರುವ ಸಾಹಿತ್ಯ ಜನಸಾಮಾನ್ಯರಿಗೆ ಅತಿ ಹೆಚ್ಚು ಅನುಕೂಲವಾಗಿದೆ.

ಇಂಥ ದಿಗ್ಗಜರ ಬರಹಗಳನ್ನು ಪ್ರತಿಯೊಬ್ಬರೂ ಪ್ರಯೋಜನ ಪಡೆದುಕೊಳ್ಳುವಂತಾಗಲು ವೈದ್ಯಕೀಯ ಮತ್ತು ವಿಜ್ಞಾನಕ್ಕೆ ಸಂಬಂಧಿಸಿದಂತೆ ಕನ್ನಡದಲ್ಲಿಯೇ ಒಂದು ವೆಬ್‌ಸೈಟ್‌ನ ಅಗತ್ಯ ಇದೆ. ಈ ನಿಟ್ಟಿನಲ್ಲಿ ಎಲ್ಲ ವೈದ್ಯಸಾಹಿತಿಗಳು ಪ್ರಯತ್ನಿಸಬೇಕೆಂದು ಅವರು ಮನವಿ ಮಾಡಿದರು.

**ನರ್ಸಿಂಗ್ ವಿದ್ಯಾರ್ಥಿಗಳೇ ಪ್ರತಿನಿಧಿಗಳು**

ರಾಜ್ಯಮಟ್ಟದ ವೈದ್ಯಕೀಯ ಸಮ್ಮೇಳನ ಎಂದು ಹೇಳಿದರೂ ಸಮ್ಮೇಳನದಲ್ಲಿದ್ದ ಪ್ರತಿನಿಧಿಗಳೆಲ್ಲರೂ ಶಿವಮೊಗ್ಗ ನಗರದ ವಿವಿಧ ನರ್ಸಿಂಗ್ ಕಾಲೇಜುಗಳ ವಿದ್ಯಾರ್ಥಿಗಳೇ ಆಗಿದ್ದರು.

ಅದರಲ್ಲೂ ಬಹುತೇಕ ವಿದ್ಯಾರ್ಥಿಗಳು ಕೇರಳದವರಾಗಿದ್ದರಿಂದ ಅತಿಥಿಗಳು ಕನ್ನಡದಲ್ಲಿ ಮಾತನಾಡುತ್ತಿರುವುದು ಅವರಿಗೆ ಅರ್ಥವಾಗುತ್ತಿಲ್ಲ ಎಂದು ಗೊಣಗುತ್ತಿದ್ದರು. ಕಾಟಾಚಾರಕ್ಕೆಂಬಂತೆ ಹೀಗೊಂದು ಸಮ್ಮೇಳನ ನಡೆಯಿತು. ಸಾರ್ವಜನಿಕರಾದರೂ ಪಾಲ್ಗೊಂಡಿದ್ದರೆ ಒಂದಿಷ್ಟು ಪ್ರಯೋಜನವಾದರೂ ಆಗುತ್ತಿತ್ತು.

**ಮೊಳಗದ ನಾಡಗೀತೆ**

ಕರ್ನಾಟಕ ಸಾಹಿತ್ಯ ಪರಿಷತ್ ಸಹಯೋಗದಲ್ಲಿ ಏರ್ಪಡಿಸಿದ್ದ ರಾಜ್ಯಮಟ್ಟದ ವೈದ್ಯಕೀಯ ಸಾಹಿತ್ಯ ಸಮ್ಮೇಳನದಲ್ಲಿ ನಾಡಗೀತೆ ಕೂಡ ಮೊಳಗಲಿಲ್ಲ. ಸಮ್ಮೇಳನದ ಅತಿಥಿಯಾಗಿದ್ದ ವೈದ್ಯ ಸಾಹಿತಿ ಡಾ॥ ಪಿ.ಎಸ್.ಶಂಕರ್ ಕೂಡ ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿ, ‘ಕುವೆಂಪು ಜಿಲ್ಲೆಯಲ್ಲಿ ನಾಡಗೀತೆ ಹೇಳದಿರುವುದು ದಿಗ್ಭ್ರಮೆ’ ಮೂಡಿಸಿತು ಎಂದು ಹೇಳಿದಾಗ ಮಾತ್ರವೇ ಕಾರ್ಯಕ್ರಮದ ಆಯೋಜಕರಿಗೆ ತಪ್ಪಿನ ಅರಿವಾಯಿತು. ಡಾ॥ ಕೆ.ಎ.ಅಶೋಕ ಪೈ ಪ್ರಾಸ್ತಾವಿಕವಾಗಿ ಮಾತನಾಡಿದರು. ಭಾರತೀಯ ವೈದ್ಯಕೀಯ ಸಂಘದ ಜಿಲ್ಲಾಧ್ಯಕ್ಷ ಡಾ॥ ವೈ.ವಿ.ಶಶಿಧರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯ ಕತ್ತಿಗೆ ಚನ್ನಪ್ಪ, ಡಾ॥ ಕೆ.ಆರ್.ಶ್ರೀಧರ್, ಡಾ॥ ಕೆ.ಬಿ. ಶೇಖರ್, ಡಾ॥ ಎಚ್.ಡಿ. ಚಂದ್ರಪ್ಪಗೌಡ ಉಪಸ್ಥಿತರಿದ್ದರು.

ನಂತರ ನಡೆದ ವಿವಿಧ ಗೋಷ್ಠಿಗಳಲ್ಲಿ ಡಾ॥ ಕೆ.ಎ.ಅಶೋಕ ಪೈ, ಡಾ॥ ರಾಜೇಂದ್ರ ಚೆನ್ನಿ, ಡಾ॥ ಸಿ.ಆರ್. ಚಂದ್ರಶೇಖರ್, ಡಾ॥ ಕಲವೀರಪ್ರಭುಕ್ಯಾಲಕೊಂಡ, ಡಾ॥ ನಾ.ಸೋಮೇಶ್ವರ, ಡಾ॥ ವಸುಂಧರ ಭೂಪತಿ, ಡಾ॥ ಪದ್ಮಿನಿ ಪ್ರಸಾದ್, ಡಾ॥ ವಿನೋದ್ ಛಬ್ಬಿ, ಡಾ॥ ಶಿವಯೋಗಿ, ಡಾ॥ ಸಿ.ಜಿ.ಕೇಶವ ಮೂರ್ತಿ, ಡಾ॥ ಕೆ.ಪಿ.ಪುತ್ತೂರಾಯ ಮೊದಲಾದವರು ಪಾಲ್ಗೊಂಡಿದ್ದರು.

*ಸೌಜನ್ಯ : **ಸಂಯುಕ್ತ ಕರ್ನಾಟಕ***
*ಸೋಮವಾರ ಮೇ ೪, ೨೦೦೯*

## ೨೦೦೮-೦೯ರ ಅವಧಿಯಲ್ಲಿ ಪ್ರಕಟವಾದ ಪುಸ್ತಕಗಳು

**ವಿಚಾರ ಸಂಕಿರಣ ಮಾಲೆ**

೧) ಕನ್ನಡ ಕಾವ್ಯ ಪರಂಪರೆಯಲ್ಲಿ ಜನಪದ ಪ್ರಜ್ಞೆ – ಸಂ: ಡಾ. ಎಂ.ಎಸ್. ಶೇಖರ್
೨) ಜನ್ನ – ಸಂ: ಡಾ. ಗಿರಡ್ಡಿ ಗೋವಿಂದರಾಜ
೩) ಶಾಂತಿನಾಥ ದೇಸಾಯಿ – ಸಂ: ಡಾ. ಗಿರಡ್ಡಿ ಗೋವಿಂದರಾಜ
೪) ನಮ್ಮ ಕಣ್ಣಲ್ಲಿ ನೀವು – ಸಂ: ಡಾ. ಮಲ್ಲಿಕಾ ಘಂಟಿ
೫) ದಲಿತ ಸಾಹಿತ್ಯ ಚಳುವಳಿ – ಸಂ: ಡಾ. ಮಲ್ಲಿಕಾ ಘಂಟಿ
೬) ಮಹಿಳೆ : ಸಂಘಟನೆ ಮತ್ತು ಹೋರಾಟ – ಸಂ: ಡಾ. ಸಬಿಹಾ ಭೂಮಿಗೌಡ

**ವಾರ್ಷಿಕ ಸಂಕಲನಗಳು**

೭) ವಿಚಾರ ಸಾಹಿತ್ಯ ೨೦೦೪ – ಸಂ: ಡಾ. ಎಸ್. ಮಾರುತಿ
೮) ಕವಿತೆ ೨೦೦೫ – ಸಂ: ಡಾ. ಮೂಡ್ನಾಕೂಡು ಚಿನ್ನಸ್ವಾಮಿ
೯) ಕವಿತೆ ೨೦೦೬ – ಸಂ: ಡಾ. ಶ್ರೀಧರ ಪಿಸ್ಸೆ
೧೦) ಮಕ್ಕಳ ಸಾಹಿತ್ಯ ೨೦೦೬ – ಸಂ: ಆನಂದ ಪಾಟೀಲ
೧೧) ವಿಚಾರ ಸಾಹಿತ್ಯ ೨೦೦೬ – ಸಂ: ಡಾ. ಎಚ್.ಟಿ., ಪೋತೆ
೧೨) ಸಾಹಿತ್ಯ ವಿಮರ್ಶೆ – ಸಂ: ಡಾ. ಬಿ.ಎಸ್. ನಾಗರತ್ನ ಕುಮಾರಿ

**ಸಂಸ್ಕೃತಿ ಮಹಿಳಾ ಮಾಲಿಕೆಗಳು**

೧೩) ಸಂಪುಟ–೧ – ಸಂ: ಡಾ. ಸಬಿಹಾ ಭೂಮಿಗೌಡ
೧೪) ಸಂಪುಟ–೨ – ಸಂ: ಡಾ. ಎಂ.ಎಸ್. ಶೇಖರ್
೧೫) ಸಂಪುಟ–೩ – ಸಂ. ಡಾ. ಶ್ಯಾಮಸುಂದರ ಬಿದರಕುಂದಿ
೧೬) ಸಂಪುಟ–೪ – ಸಂ: ಡಾ. ದಸ್ತಗೀರಸಾಬ್ ದಿನ್ನಿ
೧೭) ಸಂಪುಟ–೫ – ಸಂ: ಡಾ. ಮಲ್ಲಿಕಾ ಘಂಟಿ
೧೮) ಸಂಪುಟ–೬ – ಸಂ: ಡಾ. ವೆಂಕಟಗಿರಿ ದಳವಾಯಿ

**ಅನಿಕೇತನ ಇಂಗ್ಲಿಷ್ ಆವೃತ್ತಿ**

**ಸಂಪುಟ–xiv : ಸಂಚಿಕೆ–೨, ಸಂಚಿಕೆ–೩, ಸಂಚಿಕೆ–೪**
**ಸಂಪುಟ–xv : ಸಂಚಿಕೆ–೧**

## ಕರ್ನಾಟಕ ಸಾಹಿತ್ಯ ಅಕಾಡೆಮಿಯ ಜಾಲತಾಣ ವ್ಯವಸ್ಥೆ

ಅಧ್ಯಕ್ಷರು
**ಪ್ರೊ. ಎಂ.ಎಚ್. ಕೃಷ್ಣಯ್ಯ**

*ಜಾಲತಾಣ ಸಂಪಾದಕರು*
**ಶ್ರೀ ಜಿ.ಎನ್. ನರಸಿಂಹಮೂರ್ತಿ**

*ತಾಂತ್ರಿಕ ಸಂಪಾದಕರು*
**ಶ್ರೀ ಕೆ.ಎಸ್. ನವೀನ್**

*ಸಾಹಿತ್ಯ ಸಂಪಾದಕರು*
**ಶ್ರೀ ಎಲ್.ಎನ್. ಮುಕುಂದರಾಜ್**

ಸಲಹೆಗಾರರು : **ಶ್ರೀ ಶ್ಯಾಮಸುಂದರ್, ಶ್ರೀ ಎನ್.ಎ. ಎಂ. ಇಸ್ಮಾಯಿಲ್, ಶ್ರೀ ಎಚ್.ಪಿ. ನಾಡಿಗ್, ಶ್ರೀ ಎನ್. ವಿದ್ಯಾಶಂಕರ್**

**ನಮ್ಮ ಜಾಲತಾಣಕ್ಕೆ ಭೇಟಿ ಕೊಡಿ : "karnatakasahithyaacademy.org"**

**ನಿಮ್ಮ ಸಲಹೆ ಮತ್ತು ಪ್ರತಿಕ್ರಿಯೆಗಳಿಗೆ ಸದಾ ಸ್ವಾಗತವಿದೆ**



ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸಹಯೋಗದೊಂದಿಗೆ ಶಿವಮೊಗ್ಗದಲ್ಲಿ ನಡೆದ ರಾಜ್ಯ ಮಟ್ಟದ ವೈದ್ಯಕೀಯ ಸಾಹಿತ್ಯ ಸಮ್ಮೇಳನ ಕಾರ್ಯಕ್ರಮದ ಒಂದು ನೋಟ



'ಸಂಶೋಧನೆಯ ಹೊಸ ಸಾಧ್ಯತೆಗಳು' ಅಧ್ಯಯನ ಕಮ್ಮಟದ ಉದ್ಘಾಟನಾ ಸಮಾರಂಭ



ಕರ್ನಾಟಕ ಸಾಹಿತ್ಯ ಅಕಾಡೆಮಿಯ ಧನಸಹಾಯದೊಂದಿಗೆ ಗದಗ ಜಿಲ್ಲೆಯ ಮುಂಡರಗಿಯಲ್ಲಿ ನಡೆದ 'ಹಳಗನ್ನಡ ಓದು' ಕಾರ್ಯಾಗಾರದಲ್ಲಿ ಗಣ್ಯ ಅತಿಥಿಗಳು

# ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ ಪುರಸ್ಕೃತರು

೧೯೬೫ ಶಿವರಾಮ ಕಾರಂತ – ದ.ರಾ. ಬೇಂದ್ರೆ – ಬಿ. ಪುಟ್ಟಸ್ವಾಮಯ್ಯ – ಚಂದ್ರಶೇಖರ ಶಾಸ್ತ್ರೀ

೧೯೬೬ ತೀ.ನಂ. ಶ್ರೀಕಂಠಯ್ಯ – ಎಸ್.ಸಿ. ನಂದೀಮಠ – ಪಂಡಿತ ವೈ. ನಾಗೇಶ ಶಾಸ್ತ್ರಿ – ಬಿ. ಶಿವಮೂರ್ತಿಶಾಸ್ತ್ರಿ – ಪು.ತಿ. ನರಸಿಂಹಚಾರ್

೧೯೬೭ ಎಂ. ಮರಿಯಪ್ಪಭಟ್ಟ – ಡಿ.ಎಲ್. ನರಸಿಂಹಾಚಾರ್ – ಶಂ.ಬಾ. ಜೋಶಿ

೧೯೬೮ ಬಸವರಾಜ ಕಟ್ಟೀಮನಿ – ಸಿಂಪಿ ಲಿಂಗಣ್ಣ – ಸಾಲಿ ರಾಮಚಂದ್ರರಾಯ – ಡಿ.ಕೆ. ಭೀಮಸೇನರಾವ್ – ಅ.ನ. ಕೃಷ್ಣರಾಯ – ಜಿ.ಪಿ. ರಾಜರತ್ನಂ – ಭಾರತಿ(ತಿರುಮಲೆ ರಾಜಮ್ಮ) – ಜಯದೇವಿತಾಯಿ ಲಿಗಾಡೆ

೧೯೬೯ ಎಸ್.ಎಸ್. ಭೂಸನೂರಮಠ – ಮಿರ್ಜಿ ಅಣ್ಣಾರಾಯ – ಕಯ್ಯಾರ ಕಿಞ್ಞಣ್ಣರೈ – ಗೊರೂರು ರಾಮಸ್ವಾಮಿ ಅಯ್ಯಂಗಾರ್ – ಶಕುಂತಲಾಬಾಯಿ ಪಾಂಡುರಂಗರಾವ್ (ಗಮಕಿ)

೧೯೭೦ ಸಿ.ಕೆ. ವೆಂಕಟರಾಮಯ್ಯ – ಬೆಟಗೇರಿ ಕೃಷ್ಣಶರ್ಮ – ಆರ್.ಸಿ. ಹಿರೇಮಠ – ಎಸ್.ವಿ. ಪರಮೇಶ್ವರ ಭಟ್ಟ – ಎಸ್.ವಿ. ರಂಗಣ್ಣ – ಎಚ್.ಎಂ. ರಾಮಾರಾಧ್ಯ (ಗಮಕಿ)

೧೯೭೧ ಸೇಡಿಯಾಪು ಕೃಷ್ಣಭಟ್ಟ – ಎಂ. ಶಿವರಾಂ – ಕೀರ್ತಿನಾಥ ಕುರ್ತಕೋಟಿ – ಎಂ. ಗೋಪಾಲಕೃಷ್ಣ ಅಡಿಗ – ಜಯಲಕ್ಷ್ಮಿ ಶ್ರೀನಿವಾಸನ್

೧೯೭೨ ಸ.ಸ. ಮಾಳವಾಡ – ತ.ಸು. ಶಾಮರಾಯ – ದಿನಕರ ದೇಸಾಯಿ – ಡಿ.ಎಸ್. ಕರ್ಕಿ – ವಾಣಿ

೧೯೭೩ ಎಂ.ವಿ. ಸೀತಾರಾಮಯ್ಯ – ಕೆ.ಎಸ್. ನರಸಿಂಹಸ್ವಾಮಿ – ಕೃಷ್ಣಮೂರ್ತಿ ಪುರಾಣಿಕ – ಕೆ. ಕೃಷ್ಣಮೂರ್ತಿ

೧೯೭೪ ತ.ರಾ. ಸುಬ್ಬರಾಯ – ಪರ್ವತವಾಣಿ – ಸಿದ್ಧಯ್ಯಪುರಾಣಿಕ – ಎಚ್.ಎಲ್. ನಾಗೇಗೌಡ – ಎ.ಎನ್. ಮೂರ್ತಿರಾವ್ – ಎಂ. ರಾಘವೇಂದ್ರರಾವ್ (ಗಮಕಿ)

೧೯೭೫ ಎನ್. ಅನಂತರಂಗಾಚಾರ್ – ರಾವ್ ಬಹದ್ದೂರ್ – ಎಚ್. ದೇವೀರಪ್ಪ – ಎಲ್. ಗುಂಡಪ್ಪ – ಎಚ್.ವಿ. ಸಾವಿತ್ರಮ್ಮ – ಮಾಯಿಗೌಡ (ಗಮಕಿ)

೧೯೭೬ ಆದ್ಯರಂಗಾಚಾರ್ – ರಂ.ಶ್ರೀ. ಮುಗಳಿ – ಭಾರತೀಸುತ – ಜಿ. ವೆಂಕಟಯ್ಯ – ಎಂ.ಕೆ. ಇಂದಿರಾ – ಬಿ.ಎಸ್.ಎಸ್. ಕೌಶಿಕ್ (ಗಮಕಿ)

೧೯೭೭ ವಿನಾಯಕ ಕೃಷ್ಣ ಗೋಕಾಕ – ವಿ.ಎಂ. ಇನಾಂದಾರ್ – ನಿರಂಜನ – ಎಲ್. ಬಸವರಾಜು – ಶಾಂತಾದೇವಿ ಮಾಳವಾಡ – ಎಂ.ಎಸ್. ಅನಂತಪದ್ಮನಾಭರಾವ್ (ಗಮಕಿ)

೧೯೭೮ ವಿ. ಸೀತಾರಾಮಯ್ಯ – ಎಚ್.ಎಂ. ಶಂಕರನಾರಾಯಣರಾವ್ – ಜಯತೀರ್ಥ ರಾಜಪುರೋಹಿತ – ಚದುರಂಗ – ಅನುಪಮಾ ನಿರಂಜನ – ಬಿ.ಎಸ್. ರಾಮಾಚಾರ್ (ಗಮಕಿ)

೧೯೭೯ ಮಾಸ್ತಿ ವೆಂಕಟೇಶ ಅಯ್ಯಂಗಾರ್ – ಕೆ.ವಿ. ಪುಟ್ಟಪ್ಪ – ಕೆ.ವಿ. ಅಯ್ಯರ್ – ಕೋ. ಚನ್ನಬಸಪ್ಪ – ಗೀತಾ ಕುಲಕರ್ಣಿ – ಟಿ.ಕೆ. ರಾಮಸ್ವಾಮಿ ಅಯ್ಯಂಗಾರ್ (ಗಮಕಿ)

೧೯೮೦ ತಿರುಮಲಾಂಬ – ಆರ್. ಭೀಮಸೇನರಾವ್(ಬೀಚಿ) – ಬಿ.ಜಿ.ಎಲ್. ಸ್ವಾಮಿ – ಗೌರೀಶ ಕಾಯ್ಕಿಣಿ – ಎಚ್.ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ – ಕೆ.ಎಸ್. ವೆಂಕಟೇಶಯ್ಯ (ಗಮಕಿ)

೧೯೮೧ ನಾ. ಕಸ್ತೂರಿ – ಎನ್ಕೆ ಕುಲಕರ್ಣಿ – ಎಂ.ಎಸ್. ಸುಂಕಾಪುರ – ಪಾ.ವೆಂ. ಆಚಾರ್ಯ – ಟಿ. ಸುನಂದಮ್ಮ – ಸಿದ್ಧರಾಮ ಜಂಬಲದಿನ್ನಿ (ಗಮಕಿ)

೧೯೮೨ ಗಂಗಾಧರ ಚಿತ್ತಾಲ – ಅಶ್ವತ್ಥ – ಜಿ.ಎಸ್. ಶಿವರುದ್ರಪ್ಪ – ಸು.ರಂ.ಎಕ್ಕುಂಡಿ – ಕು.ಶಿ. ಹರಿದಾಸ ಭಟ್ಟ – ಆರ್.ಎನ್. ಗುಂಡೂರಾಮಯ್ಯ (ಗಮಕಿ)

೧೯೮೩ ವ್ಯಾಸರಾಯ ಬಲ್ಲಾಳ – ವಿಷ್ಣು ಗೋವಿಂದ ಭಟ್ಟ – ಎ.ಕೆ. ರಾಮಾನುಜನ್ – ಡಿ. ಪದ್ಮನಾಭ ಶರ್ಮ – ಹಿರೇಮಲ್ಲೂರು ಈಶ್ವರನ್ – ಜೋಳದರಾಶಿ ದೊಡ್ಡನಗೌಡ (ಗಮಕಿ)

೧೯೮೪ ದೇ. ಜವರೇಗೌಡ – ಚೆನ್ನವೀರ ಕಣವಿ – ಎಲ್.ಎಸ್. ಶೇಷಗಿರಿರಾವ್ – ಎಂ. ಚಿದಾನಂದಮೂರ್ತಿ – ಎಂ. ಅಕಬರ ಅಲಿ – ದ.ಕೃ. ಹೆಬಸೂರ (ಗಮಕಿ)

೧೯೮೫ ಎಚ್. ತಿಪ್ಪೇರುದ್ರಸ್ವಾಮಿ – ಹಾ.ಮಾ. ನಾಯಕ – ಎಸ್.ಎಲ್. ಭೈರಪ್ಪ – ಬಿ.ಸಿ. ರಾಮಚಂದ್ರಶರ್ಮ – ಶಾಂತರಸ – ಕಮಲಾ ಹಂಪನಾ

೧೯೮೬ ಕೆ. ವೆಂಕಟರಾಮಪ್ಪ – ಪ್ರಭುಶಂಕರ – ಪಿ. ಲಂಕೇಶ್ – ಶಂಕರ ಮೊಕಾಶಿ ಪುಣೇಕರ – ಬಿ.ಡಿ. ಗಣಪತಿ – ಎಸ್. ನಾಗೇಶರಾವ್ (ಗಮಕಿ)

೧೯೮೭ ಯು.ಆರ್. ಅನಂತಮೂರ್ತಿ – ಶಾಂತಿನಾಥ ದೇಸಾಯಿ – ಕೆ.ಕುಶಾಲಪ್ಪಗೌಡ – ಕೆ.ಪಿ. ಪೂರ್ಣಚಂದ್ರ ತೇಜಸ್ವಿ – ಶಾಂತಾದೇವಿ ಕಣವಿ

೧೯೮೮ ಯಶವಂತ ಚಿತ್ತಾಲ – ಎಸ್. ಅನಂತನಾರಾಯಣ – ಚಂದ್ರಶೇಖರ ಪಾಟೀಲ – ಸಿ.ಪಿ. ಕೃಷ್ಣಕುಮಾರ್ – ವೀಣಾ ಶಾಂತೇಶ್ವರ

೧೯೮೯ ರಾ.ಯ. ಧಾರವಾಡಕರ – ಚಂದ್ರಶೇಖರ ಕಂಬಾರ – ಕೆ.ಎಸ್.ನಿಸಾರ್ ಅಹಮದ್ – ಎಸ್. ನಾರಾಯಣಶೆಟ್ಟಿ (ಸುಜನಾ) – ಶ್ರೀಕೃಷ್ಣ ಆಲನಹಳ್ಳಿ

೧೯೯೦ ಜಿ.ಎಚ್. ನಾಯಕ – ಬೆಸಗರಹಳ್ಳಿ ರಾಮಣ್ಣ – ಎಂ.ಎಂ. ಕಲಬುರ್ಗಿ – ಸಾರಾ ಅಬೂಬಕರ್ – ಅರವಿಂದ ನಾಡಕರ್ಣಿ

೧೯೯೧ ಸತ್ಯಕಾಮ – ಜಿ.ಎಸ್. ಆಮೂರ – ಬಿ.ಆರ್. ನಾರಾಯಣ್ – ಅಬ್ದುಲ್ ಮಜೀದ್‌ಖಾನ್ – ಬಿ.ಟಿ. ಲಲಿತಾನಾಯಕ್

೧೯೯೨ ಕುಮಾರ ವೆಂಕಣ್ಣ – ಗಿರಡ್ಡಿ ಗೋವಿಂದರಾಜ – ಚಂದ್ರಕಾಂತ ಕುಸನೂರ – ಎಚ್.ಎಸ್. ಪಾರ್ವತಿ – ಪಿ.ವಿ. ವಜ್ರಮಟ್ಟಿ

೧೯೯೩ ಕೆ.ವಿ. ತಿರುಮಲೇಶ್ – ನಾ. ಡಿಸೋಜ – ವೀರಭದ್ರ – ಕ.ವೆಂ. ರಾಜಗೋಪಾಲ – ದು.ನಿಂ. ಬೆಳಗಲಿ

೧೯೯೪ ಗಿರೀಶ ಕಾರ್ನಾಡ್ – ಎಚ್.ಎಂ. ಚನ್ನಯ್ಯ – ಹಂಪನಾ – ವೀಚಿ(ವೀ. ಚಿಕ್ಕವೀರಯ್ಯ) – ಪಂಚಾಕ್ಷರಿ ಹಿರೇಮಠ

೧೯೯೫ ಎನ್. ಬಸವಾರಾಧ್ಯ – ಎಚ್.ಎಸ್. ಬಿಳಿಗಿರಿ – ಗೀತಾ ನಾಗಭೂಷಣ – ದೇವನೂರ ಮಹಾದೇವ – ಬಿ.ಎ. ಸನದಿ

೧೯೯೬ ರಾಘವೇಂದ್ರ ಖಾಸನೀಸ – ಜಿ.ಎಸ್. ಸಿದ್ಧಲಿಂಗಯ್ಯ – ಸಿದ್ಧಲಿಂಗಯ್ಯ – ಶೈಲಜಾ ಉಡಚಣ – ಟಿ.ವಿ. ವೆಂಕಟಾಚಲ ಶಾಸ್ತ್ರಿ

೧೯೯೭ ಜಿ. ವೆಂಕಟಸುಬ್ಬಯ್ಯ – ವೀರೇಂದ್ರ ಸಿಂಪಿ – ವಿಜಯ ಸಾಸನೂರ – ವಿಜಯಾ – ಬೊಳುವಾರು ಮಹಮದ್ ಕುಂಞ

೧೯೯೮ ಚೆನ್ನಣ್ಣ ವಾಲೀಕಾರ – ಬರಗೂರು ರಾಮಚಂದ್ರಪ್ಪ – ಪಿ.ಎಸ್. ರಾಮಾನುಜಂ – ವಿಜಯಾ ದಬ್ಬೆ – ಸಿದ್ಧಲಿಂಗ ಪಟ್ಟಣಶೆಟ್ಟಿ

೧೯೯೯ ಜಿ. ಬ್ರಹ್ಮಪ್ಪ – ಶ್ರೀನಿವಾಸ ಹಾವನೂರ – ಗುರುಲಿಂಗ ಕಾಪಸೆ – ಸಾ.ಶಿ. ಮರುಳಯ್ಯ – ವೈದೇಹಿ (ಸ್ವೀಕರಿಸಿಲ್ಲ)

೨೦೦೦ ಬಿ.ಆರ್. ವಾಡಪ್ಪಿ – ರಾಮೇಗೌಡ(ರಾಗೌ) – ಸಿ.ಎನ್. ರಾಮಚಂದ್ರನ್ – ಮಾಲತಿ ಪಟ್ಟಣಶೆಟ್ಟಿ – ಕುಂ. ವೀರಭದ್ರಪ್ಪ (ಕುಂ.ವೀ.)

೨೦೦೧ ರಂ.ಶಾ. ಲೋಕಾಪುರ – ಡಿ.ಎನ್. ಶಂಕರಭಟ್ – ಆರ್ಯಾಂಬ ಪಟ್ಟಾಭಿ – ರಾಜಶೇಖರ ನೀರಮಾನ್ವಿ – ಮ.ನ. ಜವರಯ್ಯ

೨೦೦೨ ಆರ್.ವಿ. ಕುಲಕರ್ಣಿ(ರಾಕು) – ಮುದೇನೂರ ಸಂಗಣ್ಣ – ಕೆ.ಟಿ. ಗಟ್ಟಿ – ಸುನಂದಾ ಬೆಳಗಾಂವಕರ – ಅರವಿಂದ ಮಾಲಗತ್ತಿ

೨೦೦೩ ಮಲ್ಲಿಕಾ ಕಡಿದಾಳ್ – ವಸಂತ ಎ. ದಿವಾಣಜಿ (ಕುಸುಮಾಕರ ದೇವರಗೆಣ್ಣೂರ) – ಕೆ.ವಿ. ಸುಬ್ಬಣ್ಣ – ಜಂಬಣ್ಣ ಅಮರಚಿಂತ – ಸರಜೂ ಕಾಟ್ಕರ್

೨೦೦೪ ನಿರುಪಮಾ – ಬುದ್ದಣ್ಣ ಹಿಂಗಮಿರೆ – ಭಾಲಚಂದ್ರ ಜಯಶೆಟ್ಟಿ – ಬಾನು ಮುಷ್ತಾಕ್ – ಕೆ.ಬಿ. ಸಿದ್ದಯ್ಯ

೨೦೦೫ ಕೃಷ್ಣಮೂರ್ತಿ ಕಿತ್ತೂರ – ಆರ್.ವಿ. ಭಂಡಾರಿ – ಕಾಳೇಗೌಡ ನಾಗವಾರ – ಶಶಿಕಲಾ ವೀರಯ್ಯಸ್ವಾಮಿ – ಡಾ॥ ಎಚ್. ಗಿರಿಜಮ್ಮ

೨೦೦೬ ಎನ್. ನರಸಿಂಹಯ್ಯ – ಸುಧಾಕರ – ಎಂ.ಪಿ. ಮಾಲತಿ – ಮಲ್ಲೇಪುರಂ ಜಿ. ವೆಂಕಟೇಶ್ – ಎಚ್.ಎಸ್. ಮುಕ್ತಾಯಕ್ಕ

೨೦೦೭ ಪ್ರೊ. ವಸಂತ ಕುಷ್ಟಗಿ – ಶ್ರೀ ಬಿ.ಎಲ್. ವೇಣು – ಡಾ. ಕೆ.ವಿ. ನಾರಾಯಣ – ಶ್ರೀ ಮುಳ್ಳೂರು ನಾಗರಾಜ – ಡಾ. ಹೇಮಾ ಪಟ್ಟಣಶೆಟ್ಟಿ

v v v